# ಡಾ ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) ರ ಪರಿಚಯ

**ಲೇಖನ ಇಂಗ್ಲೀಷ ನಲ್ಲಿ – ಶ್ರೀ ಪ್ರಸನ್ನ ಕುಮಾರ ಪುರಾಣಿಕ**

**ಕನ್ನಡ ಅನುವಾದ – ಶ್ರೀಮತಿ ಲತಾ ಪುರಾಣಿಕ**

ಕೊಪ್ಪಳ ಜಿಲ್ಲೆಯು (ಮೊದಲು ರಾಯಚೂರು ಜಿಲ್ಲೆಯ ಭಾಗದಲ್ಲಿತ್ತು) ಕರ್ನಾಟಕ ನಾಡಿನಲ್ಲಿದೆ. ಈ ಜಿಲ್ಲೆಯ ಧಾರ್ಮಿಕ, ಸಾಂಸ್ಕೃತಿಕ ಹಾಗೂ ರಾಜ ನೈತಿಕ ಇತಿಹಾಸದಿಂದ ಸಮೃದ್ಧಿಯಾಗಿದೆ. ಇಲ್ಲಿ ಅನೇಕ ಸಾಹಿತ್ಯಕಾರರು ಮತ್ತು ಪ್ರಸಿದ್ದ ಮಂದಿರಗಳಿರುವ ಕಾರಣ ಲೋಕಪ್ರಿಯ ಸ್ಥಳವಾಗಿದೆ. ಇದರ ಇತಿಹಾಸವು ಸಾಮ್ರಾಟ ಅಶೋಕನಿಂದ ಕದಂಬ ಚಾಲುಕ್ಯ ಇತ್ಯಾದಿ ಸಾಮ್ರಾಟರವರೆಗೆ ಹಬ್ಬಿದೆ. ಈ ಜಿಲ್ಲೆಯನ್ನು ಜೈನ ಸಮುದಾಯದವರ ಕಾಶಿ ಎಂದು ಕರೆಯಲಾಗುತ್ತದೆ.

ನಾವು ಸಿದ್ಧಯ್ಯ ಪುರಾಣಿಕರ ಬಾಲ್ಯದ ಘಟನೆಯಿಂದ ಶುರು ಮಾಡೋಣ. ಅವರ ಸ್ವಂತ ಮಾಮಾ ರವರು ಕಲಿಸುತ್ತಿದ್ದ ಶಾಲೆಯಲ್ಲಿ ನಡೆದ ಈ ಘಟನೆ – ಅವರು ಒಂದು ದಿನ ವಿದ್ಯಾರ್ಥಿಗಳ ಅಬಿರುಚಿಗಳನ್ನು ತಿಳಿದುಕೊಳ್ಳಬೇಕೇಂದು ಕುತೂಹಲಗೊಂಡು ಹುಡುಗರನೆಲ್ಲಾ ಹತ್ತಿರಕ್ಕೆ ಕರೆದು ನಿಮಗೆ ಏನು ಬೇಕು ಎಂಬುದನ್ನು ಅವರ ಸ್ಲೇಟುಗಳ ಮೇಲೆ ಬರೆಯಲು ಹೇಳಿದರು. ಮಾಸ್ತರರು ಹುಡುಗರು ಏನು ಬರೆದಿರುವರೆಂದು ನೋಡಲಾಗಿ, ಒಬ್ಬ ಮಿಠಾಯಿ ಬೇಕೆಂದು, ಇನ್ನೊಬ್ಬ ಪೆನ್ಸಿಲ ಬೇಕೆಂದು, ಹೀಗೆ ವಿಧವಿಧವಾಗಿ ತಮ್ಮ ಆಶಯಗಳನ್ನು ಬರೆದಿದ್ದರು. ಒಂದು ಸ್ಲೇಟು ಅವರ ಗಮನ ಸೆಳೆಯಿತು.. ಅದರಲ್ಲಿ ನನಗೆ ವಿದ್ಯೆ ಬೇಕು ಎಂದು ಇತ್ತು, ಆ ವಿದ್ಯಾರ್ಥಿಯೇ ಸಿದ್ಧಯ್ಯ ಪುರಾಣಿಕರು. ಅವರು ಮುಂದೆ ಬೆಳೆದು, ಐಎಎಸ್ ಪಡೆದು ಖ್ಯಾತನಾಮ ಪಡೆಯಲು ಸಾಧ್ಯವಾಯಿತು. ಈ ವಿದ್ಯೆಯ ಛಲದಿಂದ ಅವರು ಕನ್ನಡ, ಹಿಂದಿ, ಸಂಸ್ಕೃತ ಆಂಗ್ಲ ಮತ್ತು ಉರ್ದು ಭಾಷೆಗಳಲ್ಲಿ ಪಾಂಡಿತ್ಯಗಳಿಸಿದರು.ಅವರ ಸಾಹಿತ್ಯದಲ್ಲಿ ಈ ಎಲ್ಲ ಭಾಷೆಗಳ ಸ್ವಾರಸ್ಯವು ಕಂಡು ಬರುತ್ತದೆ.

ಡಾ ಸಿದ್ಧಯ್ಯ ಪುರಾಣಿಕರು ಜೂನ ೧೮, ೧೯೧೮ ದ್ಯಾಂಪುರದಲ್ಲಿ ಜನಿಸಿದರು. ದ್ಯಾಂಪುರ ಕೊಪ್ಪಳ ಜಿಲ್ಲೆಯ ಯಲಬುರ್ಗಿ ತಾಲೂಕಿನಲ್ಲಿದೆ. ಅವರ ತಂದೆಯ ಹೆಸರು ಕಲ್ಲಿನಾಥ ಶಾಸ್ತ್ರಿ ಮತ್ತು ತಾಯಿ ದಾನಮ್ಮನವರು, ಅವರ ತಂದೆಯವರು ಶ್ರೀಮಂತರಿರಲಿಲ್ಲದಿದ್ದರೂ ಅತ್ಯಂತ ಸುಸಂಸ್ಕೃತ ವ್ಯಕ್ತಿಯಾಗಿದ್ದರು. ಪುರಾಣ ಪ್ರವಚನಗಳನ್ನು ಹೇಳುತ್ತಾ ಮತ್ತು ತಾವೇ ರಚಿಸಿದ ನಾಟಕಗಳನ್ನು ಅಭಿನಯಿಸುತ್ತಾ ಜನರ ಹೃದಯವನ್ನು ಗೆದ್ದಿದ್ದರು. ಅವರೊಡನೆ ಪುರಾಣಿಕರು ಸುಖ ಮತ್ತು ಶಾಂತಿಯ

ಜೀವನ ಕಳೆದರು. ತಾಯಿ ದಾನಮ್ಮನವರು ದಾಸೋಹ ಮಾಡುವದರಲ್ಲಿ ಪ್ರಸ್ಸಿದ್ಧರಾಗಿದ್ದರು. ಅವರ ಮನೆಯಲ್ಲಿ ಯಾವಾಗಲೂ ಅತಿಥಿಗಳು ಬಂದು ಹೋಗುವ ವಾಡಿಕೆ ಇರುತ್ತಿತ್ತು. ಅವರ ಕುಟುಂಬದಲ್ಲಿ ಪುರಾಣಿಕರು ಹಿರಿಯ ಪುತ್ರರು. ಅವರಿಗೆ ಇಬ್ಬರು ಕಿರಿಯ ತಮ್ಮಂದಿರು ಅನ್ನದಾನಯ್ಯ ಮತ್ತು ಬಸವರಾಜ ಹಾಗೂ ವೀರಾವತಿ ಮತ್ತು ಶರಣಮ್ಮ ಎಂಬ ಹೆಸರಿನ ಇಬ್ಬರು ತಂಗಿಯರಿದ್ದರು. ಅವರ ಅಜ್ಜ ಚನ್ನಕವಿಗಳು ಅವರನ್ನು ಕವಿರತ್ನರೆಂದು ಕರೆಯತ್ತಿದ್ದರು. ಸಿದ್ಧಯ್ಯ ಪುರಾಣಿಕರು ಇಂಥಹ ಸಂಪನ್ನ ಕುಟುಂಬದಲ್ಲಿ ಹುಟ್ಟುವ ಸೌಭಾಗ್ಯ ಪಡೆದಿದ್ದರು. ಕೆಂಗಲ ವೀರಭದ್ರ ಅವರ ಸಂಬಂಧಿಕರು ಮತ್ತು ಅಧ್ಯಾಪಕರು ಆಗಿದ್ದರು. ಚಿಕ್ಕಂದಿನಲ್ಲಿಯೇ ಶಿಶುನಾಳ ಶರೀಫ, ಮುಪ್ಪಿನ ಷಡಕ್ಷರಿ, ಬಾಲಲೀಲಾ ಮಹಾಂತ್ ಶಿವಯೋಗಿ ಇನ್ನಿತರರ ರಚನೆಗಳ ಪರಿಚಿತರಾಗಿದ್ದರು.

ಊರಲ್ಲಿದ್ದುದು ಸಣ್ಣದ ಶಾಲೆ. ಅದನ್ನು ಊರ ಜನರೇ ನಡೆಸುತ್ತಿದ್ದರು. ಹಣದ ಕೊರತೆಯಿಂದ ಅಧ್ಯಾಪಕರ ಶಾಶ್ವತ ವ್ಯವಸ್ಥೆಯಿರಲಿಲ್ಲ. ಅದ್ದರಿಂದ ಶಾಲೆಯಲ್ಲಿ ಅಭ್ಯಾಸದ ವ್ಯವಸ್ಥೆ ಸರಿಯಾಗಿ ಇರಲಿಲ್ಲ. ಈ ಕಾರಣದಿಂದ ಕಲ್ಲಿನಾಥ ಶಾಸ್ತ್ರಿಗಳು ಪುರಾಣಿಕರಿಗೆ ಮನೆಯಲ್ಲಿಯೇ ಭಾಷೆ, ವ್ಯಾಕರಣ ಮತ್ತು ಗಣಿತ, ಅಷ್ಟೆಅಲ್ಲ ಜೈಮನಿ ಭಾರತ, ಪ್ರಭುಲಿಂಗಲೀಲೆ, ಶಬರ ಶಂಕರ ವಿಳಾಸ ಇತ್ಯಾದಿ ಪಾಠಮಾಡುತ್ತಿದ್ದರು. ಪುರಾಣಿಕರ ಜ್ಞಾನವು ಅವರ ಅಜ್ಜ ಕವಿರತ್ನ ಚನ್ನಕವಿಯವರ ಪ್ರವಚನ ಮತ್ತು ಚರ್ಚೆ ಕೇಳುವುದರಿಂದ ಶ್ರೀಮಂತಗೊಂಡಿತು. ಪುರಾಣಿಕರ ಅಗಾಧ ಜ್ಞಾನ ಅಭಿವೃದ್ಧಿಗೆ ಅವರ ಎಕಾಗ್ರತೆ ಮತ್ತು ಅವರಿಗಿದ್ದ ನೆನಪಿನಶಕ್ತಿ(ಆನೆಯ ಬುದ್ಧಿಶಕ್ತಿಯು) ಇದೇ ಅವರನ್ನು ಉಳಿದವರಿಗಿಂತ ಪ್ರತ್ಯೇಕಿಸುತ್ತದೆ. ಪುರಾಣಿಕರು ಈ ಗುಣಗಳಿಂದ ಅಧ್ಯಾಪಕರ ಪ್ರೀತಿಪಾತ್ರರಾಗಿದ್ದರು.

**ಶಾಲಾ ಶಿಕ್ಷಣ :** ದ್ಯಾಂಪುರದಲ್ಲಿ ಸರ್ಕಾರದವತಿಯಿಂದ ಪ್ರಾಥಮಿಕ ಶಾಲೆ ಪ್ರಾರಂಭವಾದರೂ ಊರಲ್ಲಿ ನಡೆದ ಕೊಲೆ ಪ್ರಸಂಗದಿಂದ ಮುಚ್ಚಬೇಕಾಯಿತು. ಪುರಾಣಿಕರ ತಂದೆ ಕಲ್ಲಿನಾಥ ಶಾಸ್ತ್ರಿಗಳು ಮಗನಿಗೆ ವಿದ್ಯಾಭ್ಯಾಸ ಕಲಿಸಲು ಶಾಲೆಗೆ ಕಳಿಸಲು ಉತ್ಸುಕರಾಗಿದ್ದರು. ಅವರು ನೆರೆಯ ಊರಾದ ಚಿಕ್ಕೇನಕೊಪ್ಪಕ್ಕೆ ಕಳಿಸಿದರು. ಅದೇ ಶಾಲೆಯಲ್ಲಿ ಅವರ ಮಾಮಾ ಅಧ್ಯಾಪಕರಾಗಿದ್ದರು. ಶಾಲೆಯು ಅಲ್ಲಿಯ ಮಠದಿಂದ ನಡೆಯತ್ತಿತ್ತು. ಊರಲ್ಲಿ ನಡೆದ ಕೊಲೆಯಿಂದ ಸ್ವಲ್ಪ ಸಮಯದಲ್ಲೇ ಈ ಶಾಲೆಯೂ ಮುಚ್ಚಲಾಯಿತು. ಆದ್ದರಿಂದ ಕಲ್ಲಿನಾಥ ಶಾಸ್ತ್ರಿಯವರು ತಮ್ಮ ಮಗನನ್ನು ಸಮೀಪದ "ವಿದ್ಯಾನಂದ ಗುರುಕುಲ"ದಲ್ಲಿ ಸೇರಿಸಿದರು. ಈ ಶಾಲೆಯಲ್ಲಿ ಪ್ರವೇಶ ಸಿಗುವುದು ಸುಲಭವಿರಲಿಲ್ಲ. ಪುರಾಣಿಕರಿಗೆ

ಅನೇಕ ರೀತಿಯ ಪರೀಕ್ಷೆ ಮಾಡಿ, ಪುರಾಣಿಕರ ಬುದ್ದಿಮತ್ತೆಗೆ ಪ್ರಿನ್ಸಿಪಾಲರು ಬೆರಗಾದರು. ಅವರು ಪುರಾಣಿಕರನ್ನು ಎರಡನೆ ಕಕ್ಷೆಗೆ ಪ್ರವೇಶ ಕೊಟ್ಟರು. ಪ್ರಿನ್ಸಿಪಾಲರ ಅನಿರೀಕ್ಷಿತ ಮೃತ್ಯುವಿನಿಂದ ಅವರ ಸ್ಥಾನಕ್ಕೆ ಬೇರೊಬ್ಬರು ಬಂದರು. ಅವರು ಯಾವಾಗಲೂ ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಓದುವದರಲ್ಲಿ ಸಮಯ ಕಳೆಯುತ್ತಿದ್ದರು. ವೈಸ್ ಪ್ರಿನ್ಸಿಪಾಲರು ಶಾಲೆ ನಡೆಸಲು ಧನರಾಶಿಯನ್ನು ಸಂಗ್ರಹಿಸಲು ವಿದ್ಯಾರ್ಥಿಗಳನ್ನು ಊರಿಗೆ ಕಳುಹಿಸುತ್ತಿದ್ದರು. ಈ ಶಾಲೆಯನ್ನು ಮುಖ್ಯವಾಗಿ ಬ್ರಾಹ್ಮಣರೇ ನಡೆಸುತ್ತಿದ್ದರು. ಅಲ್ಲಿ ಜಾತಿ ಭೇದವು ಕಾಣಿಸುತ್ತಿತ್ತು. ವೈಸ್ ಪ್ರಿನ್ಸಿಪಾಲರು ಬ್ರಾಹ್ಮಣರಲ್ಲದ ಮಕ್ಕಳಿಗೆ ಅನೇಕ ಮನೆ ಕೆಲಸ ಮಾಡಲು ಕೊಡುತ್ತಿದ್ದರು. ಈ ಅಪಮಾನ ಸಹಿಸದ ಪುರಾಣಿಕರು ಶಾಲೆಗೆ ಹೋಗುವದನ್ನು ಬಿಟ್ಟು, ಶಾಲೆಗೆ ಹೋಗುವ ನೆಪದಲ್ಲಿ ಅವರು ತಮ್ಮ ಎಲ್ಲಾ ಸಮಯ ಆಟ ಮತ್ತು ಈಜುವದರಲ್ಲಿ ಕಳೆಯತ್ತಿದ್ದರು. ಕೆಲವು ತಿಂಗಳಲ್ಲಿ ಕಲ್ಲಿನಾಥ ಶಾಸ್ತ್ರಿಗಳಿಗೆ ಇದು ತಿಳಿಯಿತು. ಪುರಾಣಿಕರನ್ನು ಕರೆದುಕೊಂಡು ಶಾಸ್ತ್ರಿಯವರು ವೈಸ್ ಪ್ರಿನ್ಸಿಪಾಲರನ್ನು ಬೇಟಿಮಾಡಿ ಯಾವ ಕಾರಣಕ್ಕಾಗಿ ಮಗ ಶಾಲೆಗೆ ಬರುವುದು ನಿಲ್ಲಿಸಿದ್ದರು ಎಂದು ಹೇಳಿದರು. ವೈಸ್ ಪ್ರಿನ್ಸಿಪಾಲರು ಪುರಾಣಿಕರಿಗೆ ಮರಳಿ ಶಾಲೆಗೆ ಸೇರಿಸಿಕೊಂಡು ನಿನ್ನಲ್ಲಿ ಬಹಳ ಭರವಸೆ ಇಟ್ಟಿರುವೆ ಮತ್ತು ಎಲ್ಲ ಶಕ್ತಿಯನ್ನು ಜ್ಞಾನವೃದ್ಧಿಗೆ ಹಾಕಲು ಹೇಳಿದರು. ಪುಸ್ತಕಾಲಯದಿಂದ "ಶಿವಭಕ್ತ ಭದ್ರಾಯು" ಪುಸ್ತಕ ಕೊಟ್ಟರು ಮತ್ತು ಅದನ್ನು ಓದಲು ಹೇಳಿದರು. ಮಾರನೇ ದಿನವೇ ಪುರಾಣಿಕರಿಗೆ ಅದರ ಸಾರಾಂಶ ಹೇಳಬೇಕಿತ್ತು. ಮರುದಿನ ಪುರಾಣಿಕರು ಹೇಳಿದ ಸಾರಂಶದಿಂದ ವೈಸ್ ಪ್ರಿನ್ಸಿಪಾಲರು ಬಹಳ ಪ್ರಭಾವಿತರಾದರು. ಅಂದಿನಿಂದ ಪುರಾಣಿಕರಿಗೆ ಪ್ರತಿದಿನವೂ ಒಂದು ಪುಸ್ತಕ ಕೊಡಲು ಪ್ರಾರಂಭಿಸಿದರು ಮತ್ತು ಮಾರನೆ ದಿನ ಪುರಾಣಿಕರು ಅದರ ಸಾರಾಂಶ ಬರೆದು ಕೊಡುತ್ತಿದ್ದರು. ಇದರಿಂದ ಪುರಾಣಿಕರ ಜೀವನದಲ್ಲಿ ಪರಿವರ್ತನೆ ಉಂಟಾಯಿತು.

ಇಂಥ ಪ್ರತಿಕೂಲದಿಂದಲೇ ಅವರ ಭಾಗ್ಯ ಬೆಳಗಿತು. ಅವರ ಜ್ಞಾನ ವೃದ್ಧಿಸಲಾರಂಭಿಸಿತು. ಪುರಾಣಿಕರು ಮಧ್ಯಮ ಶಾಲಾ ಸಾರ್ವಜನಿಕ ಪರಿಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಿ ಶಾಲೆಗೆ ಮತ್ತು ಅವರ ಕುಟುಂಬಕ್ಕೆ ಕೀರ್ತಿ ತಂದರು.

**ಕಲಬುರ್ಗಿಯಲ್ಲಿ ಶಿಕ್ಷಣ :** ಕಲ್ಲಿನಾಥ ಶಾಸ್ರಿಯವರು ತಮ್ಮ ದೂರದೃಷ್ಟಿಯಿಂದ ಉಸ್ಮಾನಿಯ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಹೈಸ್ಕೂಲಿಗೆ ಮಗನನ್ನು ಭರ್ತಿ ಮಾಡಿದರು ಯಾಕೆಂದರೆ ಮುಂದೆ

ವಿಶ್ವವಿದ್ಯಾಲಯದಲ್ಲಿ ಓದಲು ಸುಲಭವಾಗುತ್ತದೆ ಎಂದು ಅವರು ತಿಳಿದದ್ದರು. ಅವರು ತಮ್ಮ ಮಗ ಪುರಾಣಿಕರನ್ನು ಕಲಬುರ್ಗಿಗೆ ಕರೆದು ಕೊಂಡು ಹೋಗಿ ಹೈಸ್ಕೂಲ ಪ್ರಿನ್ಸಿಪಾಲರಾಗಿದ್ದ ಮೊಲವಿ ಜುಲಫಿಕಾರ ಆಲಿ ಹಕ್ಕಾನಿರನ್ನು ಭೇಟಿಮಾಡಿದರು. ಅವರು ಪುರಾಣಿಕರನ್ನು ಸಂದರ್ಶಿಸಿ ಆಂಗ್ಲ ಮತ್ತು ಗಣಿತದ ಪಾಂಡಿತ್ಯವನ್ನು ಅರಿತು ಸಂತೃಪ್ತರಾಗಿ ಹೈಸ್ಕೂಲಿಗೆ ಅವರನ್ನು ದಾಖಲಿಸಿಕೊಂಡರು. ಪುರಾಣಿಕರು ಇರಲು ಮಠದ ಹಾಸ್ಟೆಲನಲ್ಲಿ ವ್ಯವಸ್ಥೆ ಮಾಡಿ ಶಾಸ್ತ್ರಿಯವರು ದ್ಯಾಂಪುರಿಗೆ ಮರಳಿ ಬಂದರು. ಪುರಾಣಿಕರು ಗಣಿತದಲ್ಲಿ ಉತ್ತಮ ಇರುವಲ್ಲಿ ಅದನ್ನು ಉನ್ನತ ವಿಷಯ ರೂಪದಲ್ಲಿ ಆರಿಸಿಕೊಂಡರು. ಆಗ ರಹಮಾನ ಉಲ್ಲಾ ಖಾನ ಅವರ ಅದ್ಯಾಪಕರಾಗಿದ್ದರು. ಅವರು ಬಹಳ ಒಳ್ಳೆಯವರು ಮತ್ತು ಶಿಸ್ತುಪಾಲನೆಯಲ್ಲಿ ಕಟ್ಟುನಿಟ್ಟು. ಅವರು ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿದಿನವೂ ಮನೆಪಾಠ ಕೊಟ್ಟು ಮಾರನೆದಿನ ತೋರಿಸಬೇಕು ಎಂದು ಹೇಳುತ್ತಿದ್ದರು. ಪುರಾಣಿಕರು ಈ ಕಾರ್ಯವನ್ನು ನಿಯಮಿತ ರೂಪದಲ್ಲಿ ಮಾಡುತ್ತಿದ್ದರು, ಇದರಿಂದ ಅಧ್ಯಾಪಕರು ಪ್ರಭಾವಿತರಾಗಿದ್ದರು. ಆದರೆ ಒಂದುದಿನ ಅವರಿಗೆ ಮನೆಪಾಠ ಮಾಡಲು ಆಗಲಿಲ್ಲ, ಮಾರನೆ ದಿನ ಗಣಿತದ ಅಧ್ಯಾಪಕರಿಗೆ ಇದು ಗೊತ್ತಾಗಿ ಅವರು ಸಿಟ್ಟಿನಿಂದ ನೀನು ನನ್ನ ಕ್ಲಾಸಲ್ಲಿ ಓದಲು ಯ್ಯೋಗ್ಯನಿಲ್ಲ, ಬೇರೆ ವಿಷಯ ತೆಗೆದುಕೊ ಎಂದರು. ಕ್ಲಾಸನಲ್ಲಿದ್ದ ಉಳಿದ ವಿದ್ಯಾರ್ಥಿಗಳು ನಕ್ಕು ಬಿಟ್ಟರು. ಇದರಿಂದ ಅವಮಾನಿತರಾದ ಪುರಾಣಿಕರು "ನಿಮ್ಮ ವಿದ್ಯಾರ್ಥಿಯಾಗಿ ಮುಂದುವರಿಯಲು ನನಗೂ ಮನಸ್ಸಿಲ್ಲ ಎಂದು ಕ್ಲಾಸನಿಂದ ಹೊರಬಂದರು". ಮಾರನೆ ದಿನ ಕನ್ನಡ ಆಧ್ಯಾಪಕರಾದ ಭೀಮಸೇನರಾವ್ ರವರ ಬಳಿಹೋಗಿ ಅಲ್ಲಿ ನೊಂದಾಯಿಸಿಕೊಂಡರು. ಈ ಘಟನೆ ಪುರಾಣಿಕರು ಕನ್ನಡ ಬಾಷಾ-ಸಾಹಿತ್ಯದೆಡೆಗೆ ತಿರುಗಲು ಸಹಾಯಕವಾಯಿತು. ಪುರಾಣಿಕರು ಕನ್ನಡ ಆಧ್ಯಯನದಲ್ಲಿ ತಲ್ಲೀನರಾಗಿ ಶಾಲೆಯ ವಿಶಾಲ ಗ್ರಂಥಾಲಯದಲ್ಲಿ ಓದಲು ನಿರತರಾದರು. ಇದೇ ಅವಧಿಯಲ್ಲಿ ಅವರು ತಮ್ಮ ಮೊದಲ ಕವಿತೆ ರಚಿಸಿದರು ಅದಕ್ಕೆ ಪ್ರಥಮ ಬಹುಮಾನ ಬಂದಿತು. ಪುರಾಣಿಕರು ಇದ್ದ ಉಚಿತ ಹಾಸ್ಟೆಲ ಬಿಡಬೇಕಾಯಿತು ಯಾಕೆಂದರೆ ಅವರು ಅಲ್ಲಿ ನಡೆಯುತ್ತಿದ ಬ್ರಷ್ಟಾಚಾರ ಎತ್ತಿ ತೋರಿಸಿದ್ದರು. ಮುಂದೆ ಅವರು " ಗುರುಬಸವ ಮಠ" ದಲ್ಲಿ ಪ್ರವೇಶ ಪಡೆದರು.

ಅಲ್ಲಿ ಕೇವಲ ಇರುವ ವ್ಯವಸ್ಥೆ ಇತ್ತು. ಭೋಜನಕ್ಕಾಗಿ ಬೇರೆಯವರ ಆಮಂತ್ರಣಕ್ಕಾಗಿ ಕಾಯ ಬೇಕಾಗುತ್ತಿತ್ತು. ಇದು ನಿಯಮಿತಯಾಗಿ ನಡೆಯಲು ಸಾಧ್ಯವಿರಲಿಲ್ಲ. ಇದರ ಮದ್ಯೆ ಅವರ ತಂದೆಗೆ

ಪುರಾಣಿಕರ ಪ್ರವಚನ ಕಾರ್ಯ ಕಡಿಮೆಯಾಗುತ್ತಿತ್ತು. ಆದ್ದರಿಂದ ಅವರು ಆಯುರ್ವೆದ ಕಲಿತು ವೈದ್ಯರಾಗಬೇಕಾಯಿತು. ಇದರಿಂದ ಅವರ ಆದಾಯ ಕಡಿಮೆಯಾಯಿತು.

ಪುರಾಣಿಕರಿಗೆ ಅವರ ಆರ್ಥಿಕ ಸಹಾಯ ಸಿಗಲಿಲ್ಲ. ಪುರಾಣಿಕರು ಶಾಲೆಯ ಕನ್ನಡ ಸಂಘದ ಕಾರ್ಯದರ್ಶಿಗಳಾಗಿದ್ದರು ಮತ್ತು ಮುಂತಾದ ಸಾಹಿತ್ಯಿಕ ಸಮಾರಂಭಗಳನ್ನು ಆಯೋಜಿಸಿದ್ದರು. ಅವರು ಜಸ್ಟೀಸ್ ತುಕೊಳ, ದ ರಾ ಬೇಂದ್ರೆ, ರಂಶ್ರೀ ಮುಗಳಿ, ವಿ ಕೆ ಗೊಕಾಕ ಮುಂತಾದವರನ್ನು ಭೇಟಿಮಾಡಿ, ಅವರ ಭಾಷಣಗಳನ್ನು ಕೇಳಿ ಪ್ರಭಾವಿತರಾಗಿದ್ದರು. ಅತ್ಯಂತ ಪರಿಶ್ರಮದಿಂದ ಮೆಟ್ರಿಕುಲೇಶನ ಪರೀಕ್ಷೆಯಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ೩ನೆಯ ಸ್ಥಾನ ಯಾಕಂ) ಮತ್ತು ಕನ್ನಡ, ಇಂಗ್ಲೀಷನಲ್ಲಿ ಪ್ರಥಮ ಯಾಕಂ ಗಳಿಸಿದರು. ಸ್ಕೂಲ ಶಿಕ್ಷಣದಲ್ಲಿಯೇ ಇದು ಅವರ ಪ್ರಥಮ ಅತ್ಯುತ್ತಮ ಸಾಧನೆಯಾಗಿತ್ತು. ಪ್ರಿನ್ಸಿಪಾಲ ಹಕ್ಕಾನಿ, ಅಧ್ಯಾಪಕ ವರ್ಗದವರು ಮತ್ತು ಕುಟುಂಬದವರು ಈ ಸಾಧನೆಯಿಂದ ಸಂತಸಪಟ್ಟರು.

**ಇಂಟರಮಿಡಿಯಟ್ ಪರೀಕ್ಷೆ :** ಪುರಾಣಿಕರ ಮೆಟ್ರಿಕ ಪರೀಕ್ಷೆಯ ಫಲಿತಾಂಶದಿಂದ ಪ್ರಭಾವಿತರಾದ ಪ್ರಿನ್ಸಿಪಾಲ ಹಕ್ಕಾನಿಯವರು ಸ್ಕೂಲ ಹಾಸ್ಟೇಲನಲ್ಲಿ ಉಚಿತ ಪ್ರವೇಶ ಕೊಟ್ಟರು. ಜೊತೆಗೆ ಭತ್ಯೆಯನ್ನು, ವಿಶೇಷ ಓದಿನ ವ್ಯವಸ್ಥೆ ಅಷ್ಟೇಅಲ್ಲ ಸ್ಕೂಲಿನ ವ್ಯಾಯಾಮ ಶಾಲೆಯಲ್ಲಿಯೂ ಉಚಿತವಾಗಿ ಪ್ರವೇಶ ಕೊಟ್ಟರು.ಪುರಾಣಿಕರಿಗೆ ಮನಸ್ಸಿಟ್ಟು ಓದಲು ಸಲಹೆಮಾಡಿದರು. ಇಂಟರ್‌ಮಿಡಿಯಟ್ ಪರೀಕ್ಷೆಯಲ್ಲಿ ಪ್ರಪ್ರಥಮರಾಗಿ ಉತ್ತೀರ್ಣರಾಗಲು ಪ್ರೇರೇಪಿಸಿದರು. ಪುರಾಣಿಕರು ನಿಷ್ಠೆಯಿಂದ ಓದಿದರು. ಆದರೆ ಪರೀಕ್ಷೆ ಸಮೀಪಿಸುತ್ತಿರಲು ಅನಾರೋಗ್ಯದಿಂದ ಪುರಾಣಿಕರು ಬಳಲುತ್ತಿರಲು ಹೈದರಾಬಾದಗೆ ಪರೀಕ್ಷೆ ಕೊಡಲು ಹೋಗಲು ಆಗಲಿಲ್ಲ. ಇದೇ ಸಮಯದಲ್ಲಿ ತಂದೆ ತಾಯಿಯವರು ಮದುವೆ ಬಗ್ಗೆ ಪ್ರಸ್ತಾಪ ಕಳಿಸಿದರು. ಪುರಾಣಿಕರ ಮಾಮಾ ಅವರಿಗೆ ತಮ್ಮ ಮಗಳನ್ನು ಇವರೊಂದಿಗೆ ಮದುವೆ ಮಾಡುವ ಮನಸ್ಸಿತ್ತು. ಓದುವುದು ಪೂರ್ತಿ ಮಾಡಬೇಕೆಂದು ಮದುವೆಗೆ ಪುರಾಣಿಕರು ಒಪ್ಪಲಿಲ್ಲ. ಕುಟುಂಬದವರ ಮದುವೆಯ ಒತ್ತಡದಿಂದ ಪಾರಾಗಲು ಗುಪ್ತವಾಗಿ ಮನೆಯಿಂದ ಓಡಿ ಹೋಗಿ ಆಲಮಟ್ಟಿಗೆ ಹರ್ಡೇಕರ ಮಂಜಪ್ಪನವರ ಆಶ್ರಮಕ್ಕೆ ಹೋದರು. ಇದರಿಂದ ಪುರಾಣಿಕರು ಒಂದು ವರ್ಷದ ಶಿಕ್ಷಣದಿಂದ ವಂಚಿತರಾದರು ಆದರೆ ಮಂಜಪ್ಪರವರ ಮಾರ್ಗದರ್ಶನದಲ್ಲಿ ಬಹಳಷ್ಟು ಕಲಿತರು. ಜೀವನ ಪೂರ್ತಿ ಹರ್ಡೇಕರ ಮಂಜಪ್ಪನವರ ಪ್ರಭಾವ ಪುರಾಣಿಕರ ಮೇಲೆ ಇತ್ತು. ಅಲ್ಲಿ

ಇರುವಾಗ ಅಲ್ಲಿದ್ದ ವಿಶಾಲ ಗ್ರಂಥಾಲಯದ ಅಧ್ಯಯನದಲ್ಲಿ ಮುಳುಗಿ ಹೋಗಿದ್ದರು. ಆಗಿನಿಂದ ಅವರು "ಕಾವ್ಯಾನಂದ" ಎಂಬ ಕಾವ್ಯನಾಮದಲ್ಲಿ ಬರೆಯುವುದು ಪ್ರಾರಂಭವಾಯಿತು ಮತ್ತು ಅವರು ಬರೆದ ಕವಿತೆಗಳು ಪ್ರಕಾಶಿತಗೊಂಡವು. ಮುಂದೆ ತಂದೆಯವರು ಸಿಕ್ಕಾಗ ತಾವು ಮನೆಬಿಟ್ಟ ಕಾರಣ ಪರಿಸ್ಥಿತಿ ತಿಳಿಸಿದರು. ತಂದೆಯವರು ಒಪ್ಪಿಕೊಂಡು ಅವರನ್ನು ಆಶೀರ್ವದಿಸಿದರು.

ಪುರಾಣಿಕರು ಹೈದರಾಬಾದದಿಂದ ಪ್ರತ್ಯೇಕವಾಗಿ ಇಂಟರಮಿಡಿಯಟ್ ಪರೀಕ್ಷೆ ಬರೆದರು. ಅವರು ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಮೂರನೆ ಯಾಕಂಮತ್ತು ಕನ್ನಡ ಮತ್ತು ಸಂಸ್ಕೃತದಲ್ಲಿ ಪ್ರಪ್ರಥಮರಾಗಿ ಉತ್ತೀರ್ಣರಾದರು. ಪ್ರಿನ್ಸಿಪಾಲ ಹಕ್ಕಾನಿ, ಪುರಾಣಿಕರ ಕುಟುಂಬದವರು ಮತ್ತು ಊರ ಜನರಿಗೆ ಅತ್ಯಂತ ಸಂತೋಷವಾಯಿತು.

**ಹೈದರಾಬಾದದಲ್ಲಿ ಕಾಲೇಜ ಶಿಕ್ಷಣ :** ಪ್ರಿನ್ಸಿಪಾಲ ಹಕ್ಕಾನಿಯವರು ಒಂದು ಶಿಫಾರಸ ಪತ್ರ ಕೊಟ್ಟರು ಮತ್ತು ಪುರಾಣಿಕರಿಗೆ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಹುಸೇನ್ ಅಲಿ ಖಾನ ಅವರನ್ನು ಭೇಟಿ ಮಾಡಲು ಹೇಳಿದರು. ಪ್ರೊಫೆಸರ್ ಆ ಪತ್ರವನ್ನು ನೋಡಿ ಮತ್ತು ಇಂಟರಮಿಡಿಯಟ್ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪರಿಶೀಲಿಸಿ ಪುರಾಣಿಕರಿಗೆ ಕಾಲೇಜನಲ್ಲಿ ಪ್ರವೇಶಕೊಟ್ಟು, ಕಾಲೇಜ ಫೀಸನ್ನು ಮನ್ನಾ ಮಾಡಿದರು. ಪುರಾಣಿಕರು ಪಾಠಗಳನ್ನು ಶ್ರದ್ದೆಯಿಂದ ಅದ್ಯಯನ ಮಾಡುವದರ ಜೊತೆಗೆ ಬಹಳಷ್ಟು ಕನ್ನಡ ಕಾರ್ಯಕ್ರಮಗಳಲ್ಲೂ ತಮ್ಮನ್ನು ಸಕ್ರಿಯರಾಗಿ ಭಾಗಹಿಸಿದರು. ಇದರಿಂದ ದೊಡ್ಡ ದೊಡ್ಡ ಕನ್ನಡ ಸಾಹಿತ್ಯ ದಿಗ್ಗಜರನ್ನು ಭೇಟಿಯಾಗಿ ಅವರ ಭಾಷಣ ಕೇಳುವ ಅವಕಾಶ ಒದಗಿ ಬಂತು. ಪ್ರೊ ಡಿ ಕೆ ಭೀಮಸೇನರಾವ್ ಮತ್ತು ಸಾಹಿತಿ ಮಾನ್ವಿ ನರಸಿಂಹರಾವರಿಗೆ ಆತ್ಮೀಯರಾದರು.

ಅಂತಿಮ ಬಿ.ಎ. ಪರೀಕ್ಷೆಯಲ್ಲಿ ಪುರಾಣಿಕರು ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಪ್ರಥಮ ಯಾಕಂ ಪಡೆದು ಎಲ್ಲರ ಪ್ರಂಶಸೆಗೆ ಪಾತ್ರರಾದರು.

**ತಹಸೀಲ್ದಾರ**

ಇದೇ ಸಮಯದಲ್ಲಿ ತಹಸೀಲದಾರ ಹುದ್ದೆಗೆ ಅರ್ಜಿಗಳನ್ನು ಕಳಿಸಲು ಆಹ್ವಾನ ಬಂದಿತು. ಫ್ರೊ ಹುಸೇನ ಅಲಿಯವರು ಅರ್ಜಿ ಸಲ್ಲಿಸಲು ಉತ್ತೇಜಿಸಿ ಶಿಫಾರಸ ಪತ್ರವನ್ನು ಕೊಟ್ಟರು.

ಸಂದರ್ಶನ ಸಮಿತಿ ಅಧ್ಯಕ್ಷರು ಆಗಿದ್ದ ಖಾಗಿ ಸಾಹೇಬರು ಪುರಾಣಿಕರನ್ನು ವಿವಿಧ ವಿಷಯಗಳ ಬಗ್ಗೆ ಪ್ರಶ್ನಿಸಿ ಮತ್ತು ಅವರ ಬಿ.ಎ. ಪರೀಕ್ಷೆಯ ಪರಿಣಾಮ ನೊಡಿ ಪ್ರಭಾವಿತರಾಗಿ ತಹಸೀಲ್ದಾರ ಹುದ್ದೆಗೆ ಆಯ್ಕೆಮಾಡಿದರು. ಪುರಾಣಿಕರು ೩೦ ದಿನಗಳಕಾಲ ತರಬೇತಿ ಮತ್ತು ೬೦ ದಿನಗಳ ಓರಿಯೆಂಟೇಶನ್ ಅನ್ನು ಉಳಿದ ಪ್ರೊಬೇಷನರಿ ತಹಸೀಲದಾರರ ಜೊತೆ ಸೇರಿ ಪೂರ್ಣ ಮಾಡಿದರು. ಇದೇ ಸಮಯದಲ್ಲಿ ಒಂದು ದುರದೃಷ್ಟಕರ ಘಟನೆ ಘಟಿಸಿತು. ಪುರಾಣಿಕರ ಅತ್ಯಂತ ಆತ್ಮೀಯರಾಗಿದ್ದ ತಂಗಿ ವೀರಾವತಿಯವರು ದೈವಾಧೀನರಾದರು.

**ಪುರಾಣಿಕರ ವಿವಾಹ** :

ಪುರಾಣಿಕರ ವಿವಾಹವು ಅವರ ತಂದೆತಾಯಿಯವರು ಒಪ್ಪಿದ ಕನ್ಯೆ ಗಿರಿಜಾದೇವಿಯವರೊಡನೆ ೧೧ ಮೇ ೧೯೪೪ ರಲ್ಲಿ ಧಾರವಾಡದಲ್ಲಿ ನಡೆಯಿತು.

**ಸರಕಾರಿ ಸೇವೆಯಲ್ಲಿ ಪುರಾಣಿಕರ ಕೊಡುಗೆ** :

ಸಿದ್ಧಯ್ಯ ಪುರಾಣಿಕರು ಅತ್ಯಂತ ನಿಷ್ಠಾವಂತ, ಸಮರ್ಥ, ಸಮರ್ಪಿತ ಮತ್ತು ಪರಿಶ್ರಮಿ ಅಧಿಕಾರಿಗಳಾಗಿದ್ದರು. ಅವರು ಆ ಪ್ರದೇಶದ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ಕೆಲಸ ಮಾಡಿದರು. ಹೊಸ ವಿಭಾಗಕ್ಕೆ ವರ್ಗಾವಣೆ ಆದಾಗ ಅವರು ಮೊದಲು ಆ ವಿಭಾಗದ – ೫ – ಅಧಿಕಾರಿ ವರ್ಗದವರನ್ನು ಬೇಟಿಮಾಡಿ ಸಮಸ್ಯೆಗಳ ಬಗ್ಗೆ ಅರಿತುಕೊಳ್ಳುತ್ತಿದ್ದರು.

ಆ ವಿಭಾಗಕ್ಕೆ ಸಂಭಂದಿಸಿದ ನೀತಿ–ನಿಯಮಗಳನ್ನು ವಿಸ್ತಾರವಾಗಿ ಅಭ್ಯಯಿಸುತ್ತಿದ್ದರು. ಇದರಿಂದ ನಿರ್ಣಯಿಸಲು ಮತ್ತು ಸಮರ್ಥವಾಗಿ ಕಾರ್ಯಗಳನ್ನು ಶೀಘ್ರವಾಗಿ ನಿರ್ವಹಿಸಲು

ಅನುಕೂಲವಾಗುತ್ತಿತ್ತು. ಅವರು ತಮ್ಮೊಂದಿಗೆ ಕಾರ್ಯಲಯಕ್ಕೆ ಸಂಬಂಧಿತ ಅಧಿಕಾರಿಗಳನ್ನು ಜೊತೆಗೆ ಕರೆದು ಕೊಂಡಿರುತ್ತಿದ್ದರು. ಎಲ್ಲರಿಗೂ ಸರಳವಾಗಿ ಸಹಜ ರೀತಿಯಲ್ಲಿ ದೊರೆಯತ್ತಿದ್ದರು. ಯಾವಾಗಲೂ ಸರಳ ಮಾರ್ಗದಲ್ಲಿ ಕೆಲಸಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸುತ್ತಿದ್ದರು. ಅವರು ತಮ್ಮ ಹಿರಿಯ ಅಧಿಕಾರಿಗಳೊಂದಿಗೆ ಒಳ್ಳೆಯ ಸಂಬಧ ಇಟ್ಟು ಕೊಂಡು ಅವರ ಸಹಾಯದಿಂದ ಕಾರ್ಯ ಬೇಗನೆ ಪೂರ್ಣಗೊಳಿಸುತ್ತಿದ್ದರು. ಅವರ ತಮ್ಮ ವಿಶ್ವಾಸಾರ್ಹವಾದ ಮತ್ತು ಶುದ್ಧ ವ್ಯಕ್ತಿತ್ವ ದಿಂದ ಜನರನ್ನು ಆಕರ್ಷಿಸಿದ್ದರು. ಅವರು ಎಂದೂ ಜಾತಿಭೇದ ಮಾಡುತ್ತಿರಲಿಲ್ಲ. ಅವರು ಬಡವದಲಿತ ವರ್ಗದವರ ಪ್ರತಿ ಅನುಕಂಪ ಇಟ್ಟುಕೊಂಡು ತಮಗೆ ಎಷ್ಟು ಸಾದ್ಯವೊ ಅವರಿಗೆ ಸಹಾಯ ಮಾಡಲು ಪ್ರಯತ್ನಿಸುತ್ತಿದ್ದರು.

ಸಮಯದ ಮಹತ್ವವನ್ನು ಪುರಾಣಿಕರು ಅರಿತು ಮತ್ತೆ ಸಮಯವನ್ನು ಸರಿಯಾದ ರೀತಿಯಲ್ಲಿ ಸದುಪಯೋಗ ಮಾಡುತ್ತಿದ್ದರು.

ಪುರಾಣಿಕರ ಸರಕಾರಿ ಸೇವೆಯನ್ನು ಎರಡು ಭಾಗದಲ್ಲಿ ವಿವರಿಸ ಬಹುದು. ಒಂದು ಹೈದರಾಬಾದ ಕ್ಷೇತ್ರದಲ್ಲಿ ಮತ್ತು ಎರಡನೆಯದು ಕರ್ನಾಟಕ ರಾಜ್ಯದಲ್ಲಿ.

## ಹೈದರಾಬಾದ ಕ್ಷೇತ್ರದಲ್ಲಿ ಪುರಾಣಿಕರ ಸೇವೆ :

ತರಬೇತಿ ಯಾದ ನಂತರ ನಾಂದೇಡನಲ್ಲಿ ಮೊದಲ ನೇಮಕಾತಿಯಾಯಿತು. ಆಗ ಬಂದ ಪ್ಲೇಗ ಮತ್ತು ಬರಗಾಲದ ಕಾರಣದಿಂದ ರೈತರು ಬೆಳೆದ ಬೆಳೆಯನ್ನು ಅವರಿಂದ ವಸೂಲಿ ಮಾಡುವದು ಕಷ್ಟವಾಗಿತ್ತು. ವಸೂಲಿ ಮಾಡುವ ಸಮಯದಲ್ಲಿ ಒಬ್ಬ ಅಧಿಕಾರಿಯ ಹತ್ಯೆಯಾಗಿತ್ತು. ಅದಕ್ಕೆ ಯಾವ ತಹಸೀಲ್ದಾರರು ಹೋಗಲು ನಿರಾಕರಿಸಿದ್ದರು. ಪುರಾಣಿಕರು ಯಾವ ಪೋಲಿಸ್ ಸಹಾಯವಿಲ್ಲದೆ ಹೋಗಲು ತಯ್ಯಾರಾದರು. ಊರಿನ ರೈತರ ಸುಖ ದುಃಖದ ಬಗ್ಗೆ ಕೇಳಿ ತಿಳಿದುಕೊಂಡು ಅವರ ಹೃದಯವನ್ನು ಗೆದ್ದು ಅವರಿಗೆ ರೇಶನ ಕಾರ್ಡ ಕೊಟ್ಟು, ರೇಶನ ದೊರಕಿಸಿಕೊಟವಟರು. ಇದರಿಂದ ಪ್ರಭಾವಿತರಾದ ರೈತರು ಬೆಳೆದ ಧಾನ್ಯ ಲೆವಿ ಕೊಟ್ಟರು. ೧೯೪೫ ರಲ್ಲಿ ಪುರಾಣಿಕರನ್ನು ಗುಲಬರ್ಗಾಗೆ ವರ್ಗವಣೆ ಆಯಿತು. ಅಲ್ಲಿ ಭೂಮಿ ರಿಕಾರ್ಡನ ಸಹಾಯಕ ಕಮೀಷನರ ರಾದರು. ಮುಂದೆ ೧೯೪೮ ರಲ್ಲಿ ಜಾಹಿರಾತು ಇಲಾಖೆ ಯಲ್ಲಿ ಅಸಿಸ್ಟಂಟ ಕಮೀಷನರ ರಾದರು. ಇದೇ ಸಮಯದಲ್ಲಿ ಮುಸ್ಲಿಂ

ರಜಾಕಾರ ಅಂದೋಲನ ಕಾರಣದಿಂದ ಅಶಾಂತಿ ಇದ್ದು ಹಿಂದೂ ಜನರು ಭಯಭೀತರಾಗಿದ್ದು, ಅವರ ಮೇಲೆ ದಾಳಿ ಮಾಡುತ್ತಿದ್ದರು. ೧೯೫೧ ರಲ್ಲಿ ಹೈದರಾಬಾದಗೆ ಅಸಿಸ್ಟಂಟ ರೇವೆನ್ಯೂ ಸೆಕ್ರೆಟರಿ ರಾಗಿ ವಾರ್ಗಾವಣೆಯಾಯಿತು. ೧೯೫೨ ರಲ್ಲಿ ಮಂತ್ರಿಯಾಗಿದ್ದ ಅಣ್ಣಾರಾವ್‌ರಿಗೆ ಪ್ರೆವೇಟ್ ಸೆಕ್ರೆಟರಿ ಆದರು. ಎಲ್ಲಾ ತಾಲುಕುಗಳನ್ನು ಸುತ್ತಿ, ಅವಶ್ಯಕತೆಗೆ ಅನುಗುಣವಾಗಿ ಕಲ್ಯಾಣಕಾರ್ಯಗಳಿಗೆ ಅಲ್ಲಿಯೇ ಅನುಮೋದನೆ ಕೊಟ್ಟರು ಕೆಲಸ ಪ್ರಾರಂಭಿಸಿದರು. ಅವುಗಳಲ್ಲಿ ಕುಡಿಯುವನೀರು, ಸಣ್ಣದಾರಿಯ ನಿರ್ಮಾಣ, ಸ್ವಚ್ಛತೆ ಮುಂತಾದ ಕಾರ್ಯಗಳು. ೧೯೫೩ ರಲ್ಲಿ ಪುರಾಣಿಕರು ಕೃಷಿ ಮಂತ್ರಿ ಚೆನ್ನಾರೆಡ್ಡಿ ಯವರ ಖಾಸಗಿ ಕಾರ್ಯದರ್ಶಿಯಾದರು. ಇದೇ ಸಮಯದಲ್ಲಿ ಅನೇಕ ಸಣ್ಣ ನೀರಾವರಿ ಯೋಜನೆಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಪ್ರಾರಂಭಿಸಿ ಮತ್ತು ಪೂರ್ಣಗೊಳಿಸಿದರು. ೧೯೫೫ ರಲ್ಲಿ ಪುರಾಣಿಕರಿಗೆ ತಾಂಡೂರಿಗೆ ಡೆಪ್ಯುಟಿ ಕಲೆಕ್ಟರ್‌ರಾಗಿ ವರ್ಗಾವಣೆಯಾಯಿತು. ಅವರು ಹೊಸ ಶಾಲೆಗಳ ನಿರ್ಮಾಣ, ಶಾಲೆಗಳಿಗೆ ಹೊಸ ಕಟ್ಟಡ, ಸಣ್ಣ ನೀರಾವರಿ ಯೋಜನೆ ಮತ್ತು ಅನೇಕ ವಿಕಾಸ ಯೋಜನೆಗಳನ್ನು ಪ್ರಾರಂಭಿಸಿದರು.

## ಕರ್ನಾಟಕ ರಾಜ್ಯದಲ್ಲಿ ಪುರಣಿಕರ ಸರಕಾರಿ ಸೇವೆ :

೧೯೫೬ ನವಂಬರ್ ನ ಮೊದಲನೇಯ ತಾರೀಖಿನಂದು ಭಾಷಾ ಆಧಾರದ ಮೇಲೆ ಒಂದು ದೊಡ್ಡ ರಾಜ್ಯವಾಗಿ ಕರ್ನಾಟಕವನ್ನು ಮರು ಸಂಘಟಿಸಲಾಯಿತು. ಪುರಾಣಿಕರು ಕರ್ನಾಟಕವನ್ನು ತಮ್ಮ ಸರಕಾರಿ ಸೇವೆ ಸಲ್ಲಿಸಲು ಆಯ್ಕೆಮಾಡಿಕೊಂಡರು. ಇದರಿಂದ ಅವರ ಮೂರು ವರಷದ ತಮ್ಮ ಸಿರ್ವಿಸನಲ್ಲಿದ್ದ, ಹಿರಿತನದಿಂದ, ದೊರುಕುತ್ತಿದ್ದ ಮುಖ್ಯ ಕಾರ್ಯದರ್ಶಿಯಾಗುವ ಅವಕಾಶ ದಿಂದ ವಂಚಿತರಾದರು. ಅವರು ಕನ್ನಡ ನಾಡಿಗಾಗಿ ಸೇವೆ ಸಲ್ಲಿಸಲು ಬದ್ಧರಾದರು. ೧೯೫೭ ರಲ್ಲಿ ಅವರು ಯಾದಗಿರಿಯ ಉಪ ಜಿಲ್ಲಾಧಿಕಾರಿಯಾಗಿ ನಿಯುಕ್ತರಾದರು. ಹಿಂದುಳಿದ ಕ್ಷೇತ್ರವಾಗಿದ್ದ ಅಲ್ಲಿ ಅನೇಕ ಯೋಜನೆಗಳನ್ನು ಪ್ರಾರಂಭ ಮಾಡಿದರು. ಭೂಮಾಲೀಕರನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಶಿಕ್ಷಣದ ಬಗ್ಗೆ ಅರಿವು ಮೂಡಿಸಿ ಪುರಾಣಿಕರು ಶಾಲೆಗಳನ್ನು ತೆರೆಯಲು ಅವರಿಂದ ಭೂಮಿ ಪಡೆದು ಶಾಶ್ವತ ಶಾಲಾ ಕಟ್ಟಡ ಕಟ್ಟಿದರು. ಅನೇಕ ಗ್ರಂಥಾಲಯಗಳನ್ನು ಪ್ರಾರಂಭಿಸಿದರು, ಮಹಿಳೆಯರಿಗಾಗಿ ಮಹಿಳಾ ಮಂಡಳಿಗಳನ್ನು ಪ್ರಾರಂಭಿಸಿದರು ಮತ್ತು ಅದರಿಂದ ಮಹಿಳೆಯರಿಗೆ ಉದ್ಯೋಗ ದೊರೆಯುವಂತೆ ವ್ಯವಸ್ಥೆಮಾಡಿದರು. ಡಾ ಎಂ ಸಿ ಮೋದಿ ಯವರ ಸಹಾಯ ದಿಂದ ಕಣ್ಣಿನ ಚಿಕಿತ್ಸಾ ಶಿಬಿರ ತೆರೆಸಿದರು.

ಹರಿಜನ ಕಾಲೊನಿ ನಿರ್ಮಾಣ ಮಾಡಿ, ಕುಡಿಯುವ ನೀರು, ವಿದ್ಯುತ್ತ, ಶಾಲೆ ಮತ್ತು ಚಿಕಿತ್ಸೆಗೆ ಚಿಕಿತ್ಸಾಲಯಗಳ ಅನುಕೂಲ ಮಾಡಿದರು ಮತ್ತು ಉದ್ಯೋಗ ಗಳು ದೊರೆಯುವ ವ್ಯವಸ್ಥೆ ಮಾಡಿದರು.

೧೯೫೮ ರಲ್ಲಿ ಪುರಾಣಿಕರಿಗೆ ಐ.ಎ.ಎಸ್ ಕೇಡರ್ ನಲ್ಲಿ ಪದೋನ್ನತಿ ದೊರೆಯಿತು. ಅವರು ಬೆಂಗಳೂರಿಗೆ ವರ್ಗಾವಣೆಯಾಗಿ ಶಿಕ್ಷಣ ಇಲಾಖೆ ಉಪ ಕಾರ್ಯದರ್ಶಿಯಾಗಿ ಸೇವೆ ಪ್ರಾರಂಭಿಸಿದರು. ಪ್ರೈಮರಿ, ಹೈಸ್ಕೂಲು, ಕಾಲೇಜ, ಪಾಲಿಟೆಕ್ನಿಕ ಕಾಲೇಜ ಎಲ್ಲಾ ಸ್ಥಳಗಳಲ್ಲಿ ಪ್ರಾರಂಭಿಸಲು ಕಾರಣೀಪುರುಷರಾದರು. ಕನ್ನಡ ಸಾಹಿತ್ಯ ಪರಿಷತ್ತನಿಂದ ಪ್ರಥಮ ಸಮಗ್ರ ಕನ್ನಡ ಶಬ್ದಕೋಶ ಮತ್ತು ಮೈಸೂರು ವಿಶ್ವವಿದ್ಯಾಲಯ ವತಿಯಿಂದ ವಿಶ್ವ ಕೋಶ ಯೋಜನಾ ಮಾಡಲು ಮುಂದಾಳತ್ವ ವಹಿಸಿದರು. ಶಬ್ದಕೋಶ ಸಮಿತಿಯ ಸದಸ್ಯರಾಗಿದ್ದರು ಬಹಳ ವರ್ಷಗಳವರೆಗೆ ಕೆಲಸ ಮಾಡಿ, ಕನ್ನಡ ಸಾಹಿತ್ಯದಲ್ಲಿ ತಮ್ಮ ವಿದ್ವತ್ತದಿಂದ ಕಾರ್ಯಗಳನ್ನು ಮುಗಿಸಲು ತೀವ್ರತೆಕೊಟ್ಟರು. ಅವರು ರವೀಂದ್ರ ಕಲಾಕ್ಷೇತ್ರದ ಸಭಾಂಗಣ ಕಟ್ಟುವಲ್ಲಿ ಪರಿಶ್ರಮದಿಂದ ಧನ ಸಂಗ್ರಹ ಮಾಡಿದರು. ಪ್ರಸಿದ್ಧ ಕನ್ನಡ ಸಾಹಿತಿಗಳ ಪುಸ್ತಗಳನ್ನು ಮುದ್ರಿಸಲು ನಿಧಿ ಸಂಗ್ರಹಿಸಿ ಮುದ್ರಿಸಿದರು. ಇದರಿಂದ ಪುಸ್ತಕಗಳು ಓದುಗರಿಗೆ ಕಡಿಮೆ ದರದಲ್ಲಿ ಒದಗಿದವು.

೧೯೬೨ರಲ್ಲಿ ಪುರಾಣಿಕರು ಸೂಚನಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ನಿರ್ದೇಶಕರಾದರು. ಆಗ, ಮೈಸೂರು ದಸರಾ ಪ್ರದರ್ಶನದಲ್ಲಿ ಜಾಹಿರಾತು ಇಲಾಖೆಯ ಮಳಿಗೆಗೆ ಸುವರ್ಣ ಪದಕ ಪ್ರಾಪ್ತವಾಯಿತು. ಆ ಸಮಯದಲ್ಲಿ ಸರ್ಕಾರದ ಬಜೆಟನಲ್ಲಿ ಜಾಹೀರಾತಿಗೆ ಹಣ ಬಹಳ ಕಡಿಮೆ ಇತ್ತು, ಅದು ದೊಡ್ಡ ಪ್ರಕಾಶಕರ ಪ್ರಭಾವದಲ್ಲಿತ್ತು. ಪುರಾಣಿಕರು ಎಲ್ಲಾ ಪ್ರಕಾಶಕರಿಗೆ ಹಣ ವಿತರಣೆಯಾಗುವ ವ್ಯವಸ್ಥೆ ಮಾಡಿದರು. ಪ್ರವಾಸೋದ್ಯಮ ಪ್ರೋತ್ಸಾಹಿಸಲು ಹಲವಾರು ಸರಕಾರಿ ಭವನಗಳ ನಿರ್ಮಾಣ ಮಾಡಲಾಯಿತು.

೧೯೬೪ ರಲ್ಲಿ ಪುರಾಣಿಕರು ಹಣಕಾಸಿನ ಇಲಾಖೆಗೆ ಉಪ ಕಾರ್ಯದರ್ಶಿ ಹಾಗೂ ಸುವರ್ಣ ನಿಯಂತ್ರಣಾಧಿಕಾರಿಯೆಂದು ನಿಮಿತ್ತ ಗೊಂಡರು. ಅವರು ಅಕ್ಕಸಾಲಿಗರು ಮತ್ತು ಕುಶಲ ಕರ್ಮಿಗಳಿಗೆ ಯಾಕು ಉದ್ಯೋಗ ದೊರಕಿಸಲು ವ್ಯವಸ್ಥೆಮಾಡಿದರು ಮತ್ತು ಅವರಿಗೆ ಆರ್ಥಿಕ ಸಹಾಯ ಕೊಟ್ಟರು ಎಕೆಂದರೆ ಆಗ ಚೀನಾ ಯುದ್ದದ ಕಾರಣ ಅವರ ಆರ್ಥಿಕ ಸ್ಥಿತಿ ಹದಗೆಟ್ಟಿತ್ತು ಹಣಕಾಸಿನ ಇಲಾಖೆಯು ಎಲ್ಲಾ ಸರಕಾರಿ ವಿಭಾಗಗಳ ನೋಡಲ್ ಎಜೆನ್ಸಿ ಆಗಿದ್ದ ಕಾರಣ, ಪುರಾಣಿಕರು ತೀವ್ರವಾಗಿ ಎಲ್ಲ

ಇಲಾಖೆಗಳ ಜೊತೆಗೆ ಸಂವಹನ ನಡೆಸಿದರು ಇದರಿಂದ ಎಲ್ಲಾ ಫೈಲ್‌ಗಳನ್ನು ವಿಕಾಸ ಯೋಜನಾ ಕಾರ್ಯಗಳನ್ನು ಶೀಘ್ರವಾಗಿ ವಿಲೇವಾರಿಯಾಗುವಂತೆ ಮಾಡಿದರು.

೧೯೬೫ ರಲ್ಲಿ ಪುರಾಣಿಕರಿಗೆ ಡೆಪ್ಯುಟಿ ಕಮಿಷನರ್‌ರಾಗಿ ಕೊಡಗು ಜಿಲ್ಲೆಗೆ ವರ್ಗಾವಣೆಯಾಯಿತು. ಕರ್ನಾಟಕದ ಮುಖ್ಯಮಂತ್ರಿ ಆಗಿದ್ದ ಶ್ರೀ ಎಸ್ ನಿಜಲಿಂಗಪ್ಪ ನವರು ಕರೆದು, "ಕರ್ನಾಟಕ ರಾಜ್ಯದಲ್ಲಿ ಕೂಡಿಕೊಳ್ಳುವ ಮೊದಲು, ಒಂದು ಸ್ವತಂತ್ರ ರಾಜ್ಯ ವಾಗಿತ್ತು. ಆಗ ಕೊಡಗಿಗೆ ತನ್ನದೆ ಸರಕಾರವಿತ್ತು. ಅಲ್ಲಿಯಾವುದೇ ಅಭಿವೃದ್ದಿ ಕಾರ್ಯಗಳು ಆಗದಿದ್ದ ಕಾರಣ ಜನರು ತೃಪ್ತರಾಗಿರಲಿಲ್ಲ."ಎಂದು ಹೇಳಿ ಪುರಾಣಿಕರಿಗೆ ಅಲ್ಲಿಯ ಸಮಗ್ರ ವಿಕಾಸ ಕಾರ್ಯಗಳನ್ನು ಮಾಡಿ ಜನರ ಗ್ರಹಿಕೆ ಬದಲಿಸುವಂತೆ ಹೇಳಿದರು. ಪುರಾಣಿಕರು ಎಲ್ಲ ಕ್ಷೇತ್ರಗಳಲ್ಲಿ ಯೋಜನೆಗಳ ಪ್ರಕಾರ ಕೊಡಗಿನ ವಿಕಾಸ ಕಾರ್ಯ ಕೂಡಲೇ ಪ್ರಾರಂಭಿಸಿದರು.

ಕಾವೇರಿಯ ಮೂಲ ತಲಕಾವೇಯಲ್ಲಿ ವಿದ್ಯುತ ವ್ಯವಸ್ಥೆ ಮಾಡಿದರು ಮತ್ತು ಅಲ್ಲಿ ಸರಕಾರಿ ಅತಿಥಿಗೃಹ ನಿರ್ಮಿಸಿದರು. ಇದರಿಂದ ಬೇರೆ ಹಲವು ಖಾಸಗಿ ಅತಿಥಿಗೃಹಗಳು ನಿರ್ಮಾಣವಾದವು. ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿಯಾಯಿತು. ಕೊಡಗಿನ ಮುಖ್ಯ ನಗರ ಮಡಿಕೇರಿಯಲ್ಲಿ ಹೆಚ್ಚು ಮಳೆಯಾಗುತಿತ್ತು.

ಆದರೆ ಅಲ್ಲಿಯೇ ನೀರಿನ ಜಲಸಂಗ್ರಹಣೆಯ ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ಬೇಸಿಗೆಯಲ್ಲಿ ನೀರಿನ ಅಭಾವ ಕಂಡು ಬರುತ್ತಿತ್ತು. ಪುರಾಣಿಕರು ಮಡಕೇರಿಯಲ್ಲಿ ಸಮಗ್ರ ನೀರಿನ ಸಂಗ್ರಹ ವ್ಯವಸ್ಥೆ ಶುರುಮಾಡಿದರು. ಕೊಡಗಿನಲ್ಲಿ ಮಳೆ ತುಂಬಾ ಬರುತ್ತಿದ್ದರೂ ವರ್ಷಕ್ಕೆ ಒಂದೇ ಬೆಳೆ ಬೆಳೆಯುತ್ತಿದ್ದರು. ಪುರಾಣಿಕರು ಎರಡನೆಯ ಬೆಳೆ ಬೆಳೆಸುವಲ್ಲಿ ಪ್ರವರ್ತಕರಾಗಿ ಪ್ರಾರಂಭಿಸಿದರು ಮತ್ತು ಸಫಲರಾದರು, ಜನರಿಂದ, ಹಿರಿಯ ಅಧಿಕಾರಿಗಳಿಂದ ಮತ್ತು ಪತ್ರಿಕಾ ಮಾಧ್ಯಮದವರಿಂದ ಪ್ರಶಂಸೆ ಲಭಿಸಿತು. ಒಳಗಿನ ಹಳ್ಳಿಗಳಿಗೆ ರಸ್ತೆಗಳ ನಿರ್ಮಾಣ, ರಸ್ತೆಬದಿ ವಿದ್ಯುದ್ದೀಪಗಳು ಮತ್ತು ಇತರ ಸುಧಾರಣೆಗಳನ್ನು ಪುರಾಣಿಕರು ಮಾಡಿದರು. ೧೯೬೫ ರಲ್ಲಿ ಭಾರತ–ಪಾಕಿಸ್ತಾನ ಯುದ್ಧ ಸಮಯದಲ್ಲಿ ಪುರಾಣಿಕರು ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿ ಮತ್ತು ರಾಷ್ಟ್ರರಕ್ಷಣಾ ನಿಧಿಗೆ ಹಣ ಸಂಗ್ರಹ ಮಾಡಿದರು. ಕರ್ನಾಟಕದಲ್ಲಿ ಎಲ್ಲಾ ಜಿಲ್ಲೆಗಳಿಗಿಂತ ಚಿಕ್ಕದಾಗಿದ್ದರೂ ಎರಡರ ಸಂಗ್ರಹದಲ್ಲಿ ಕೊಡಗು ಜಿಲ್ಲೆ ಪ್ರಥಮ ಸ್ಥಾನದಲ್ಲಿ ಇತ್ತು. ಅವರು ಯುವಕರನ್ನು ಸೇನೆಯಲ್ಲಿ ಭರ್ತಿಯಾಗಲು ಉತ್ತೇಜಿಸಿದರು ಮತ್ತು

ಇಲ್ಲಿರುವರನ್ನು ಅಧಿಕ ಸಂಖ್ಯೆಯಲ್ಲಿ ಭಾರತ ಸೇನೆಗೆ ಸೇರಿಸಿದರು. ಕೊಡಗಿನಲ್ಲಿ ಡೆಪ್ಯುಟಿ ಕಮಿಷನರ್ ರಾಗಿ ನೇಮಕರಾಗಿದ್ದಾಗ ೧೮೦೦ ಕಡತಗಳು ಆಫೀಸ್ ನಿರ್ಣಯಕ್ಕಾಗಿ ಕಾಯ್ದಿದ್ದವು. ತಾಲೂಕು ಮಟ್ಟದಲ್ಲಿ ಇವುಗಳಲ್ಲಿ ಸ್ಪಷ್ಟೀಕರಣವಾಗಬೇಕಿತ್ತು. ತಾಲೂಕುಗಳಿಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಹೋಗಿ, ಅವಶ್ಯಕ ವಿವರಣೆ ತಿಳಿದು ಅಲ್ಲಿಯೇ ಫೈಲ್‌ಗಳನ್ನು ಪೂರ್ತಿ ಮಾಡಿ ಮಂಜೂರಾತಿ ಮಾಡಿದರು. ಮಡಿಕೇರಿಯಲ್ಲಿ ಜಲಸಂಪನ್ನ ಪೂರ್ತಿ ಯಾದ ಮೇಲೆ ಉದ್ಘಾಟನೆಗೆ ಬಂದ ಅಧ್ಯಕ್ಷ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪರವರು ಪುರಾಣಿಕರನ್ನು ಅಭಿನಂದಿಸಿ ಎಲ್ಲ ಜನರಿಗೆ ಸಂತೃಪ್ತಿಯಾಗುವ ಪ್ರಶಂಸನಿಯ ವಿಕಾಸ ಕಾರ್ಯ ಮಾಡಿರುವಿರಿ ಎಂದರು. ಬೆಂಗಳೂರಿಗೆ ವರ್ಗಾವಣೆಯಾಗಿ ಪುರಾಣಿಕರು ಹೊರಟಾಗ, ಅನೇಕರು ಬೀಳ್ಕೊಡುಗೆ ಸಮಾರಂಭಗಳನ್ನು ಆಯೋಜಿಸಿ ಜನರಿಗಾಗಿ ಮಾಡಿದ ಅವರ ವಿಕಾಸ ಕಾರ್ಯಗಳನ್ನು ಮನಃಪೂರ್ತಿ ಪ್ರಶಂಸಿದರು. ಸ್ವತಂತ್ರ ಕೊಡಗಿನಲ್ಲಿ ಆಗದಿದ್ದ ಅಭಿವೃದ್ಧಿ ಈ ಎರಡು ವರ್ಷ ಸಮಯದಲ್ಲಿ ಕೊಡಗಿನಲ್ಲಿ ಆಯಿತು. ಪುರಾಣಿಕರ ಕಾರ್ಯ ದಕ್ಷತೆ ಬಗ್ಗೆ " ದಕ್ಷತೆಯಲ್ಲಿ ಮುನ್ನಡೆ" ಎಂಬ ಶೀರ್ಷಿಕೆ ಅಡಿ ಇಂಡಿಯನ ಎಕ್ಸಪ್ರೆಸ ಸಮಾಚಾರ ಪತ್ರಿಕೆ ಯಲ್ಲಿ ಲೇಖನ ಬಂದಿತು.

೧೯೬೭ ರಲ್ಲಿ ಸಾರಿಗೆ ಇಲಾಖೆಗೆ ಬೆಂಗಳೂರಿಗೆ ವರ್ಗಾವಣಿಯಾಗಿ ಬಂದರು. ಇಲ್ಲಿ ಬಸ್ ಪರ್ಮಿಟ್ ಕೊಡುವಲ್ಲಿ ಬ್ರಷ್ಟಾಚಾರ ಬ್ರಹ್ಮಾಂಡವಾಗಿತ್ತು. ಪುರಾಣಿಕರು ಪೂರ್ತಿ ಅಧ್ಯಯನ ಮಾಡಿ ಎಲ್ಲ ಅರ್ಹರಿಗೆ ಪರ್ಮಿಟ್ ಕೊಟ್ಟರು ಮತ್ತು ರಾಜ್ಯದ ಬಸ್‌ಗಳನ್ನು ಮತ್ತು ಅಂತರ ರಾಜ್ಯ ಬಸ್ ಗಳನ್ನು ಹೆಚ್ಚಿಸಿದರು. ಯಾತ್ರೆ ಬಸ್‌ಗಳಿಗೆ ಪರ್ಮಿಟ ಕೊಟ್ಟು ಬಸ್ ಸಂಖ್ಯೆಗಳನ್ನು ಹೆಚ್ಚಿಸಿದರು. ಕರಗಳನ್ನು ಹೆಚ್ಚಿಸದೇ ಸರಕಾರಕ್ಕೆ ಆದಾಯ ಹೆಚ್ಚ ತೊಡಗಿತು. ಬ್ರಷ್ಟಾಚಾರ ತಡೆಯಲು ಶ್ರಮಿಸಿ ಜಾಗರೂಕತೆಯಿಂದ ಅನೀರಿಕ್ಷಿತ ಭೇಟಿ ಕೊಟ್ಟು ಲೋಪದೋಷಗಳನ್ನು ಕಂಡುಹಿಡಿದು ಸುದಾರಣೆ ತಂದರು.

ಪುರಾಣಿಕರು ಜಿಲ್ಲಾ ಮಟ್ಟದಲ್ಲಿ, ಅಧಿಕಾರಗಳನ್ನು ನೇಮಿಸಿ ವಿಕೇಂದ್ರಿಕೃತ ಶಕ್ತಿ ಒದಗಿಸಿ, ಅವರಿಗೆ ಎಲ್ಲ ಅನುಕೂಲ ಮಾಡಿಕೊಟ್ಟರು. ಅವಶ್ಯಕತೆಯ ಅನುಸಾರ ಸಿಬ್ಬಂದಿಗಳ ವ್ಯವಸ್ಥೆ ಮಾಡಿದರು. ಪುರಾಣಿಕರ ಮೂರು ವರ್ಷಗಳ ಕಾರ್ಯದ ಅವಧಿಯಲ್ಲಿ ವರ್ಷಕ್ಕೆ ೭ ಕೋಟಿ ಆದಾಯ ಇದ್ದದ್ದು ೧೧ ಕೋಟಿ ಆದಾಯಕ್ಕೆ ಏರಿತು. ಸರಕಾರ ಇದನ್ನು ಬಹಳವಾಗಿ ಪ್ರಶಂಸಿಸಿತು.

೧೯೭೦ ರಲ್ಲಿ ಪುರಾಣಿಕರು ಬೆಳಗಾವಿ ಜಿಲ್ಲೆಗೆ ಡೆಪ್ಯುಟಿ ಕಮಿಷನರ್‌ರಾಗಿ ನೇಮಕರಾದರು. ಬೆಳಗಾವಿಯು ಕನ್ನಡ ಭಾಷೆ ಮತ್ತು ಮರಾಠಿ ಭಾಷೆಯ ಜನರ ನಡುವೆ ವಾದ, ವಿವಾದ ಸಮಸ್ಯೆಗಳ ಪ್ರದೇಶವಾಗಿತ್ತು. ಅಲ್ಲಿ ಕೆಲವು ತಾಲ್ಲೂಕುಗಳಲ್ಲಿ ಬಹಳ ಮರಾಠಿ ಬಾಷಿಗರು ಇರುವಲ್ಲಿ ವಿಕಾಸ ಕಾರ್ಯಗಳು ನಡೆದಿರಲಿಲ್ಲ. ಇದೇ ಕಾರಣದಿಂದ ವಿವಾದಗಳು ಇದ್ದವು. ಪುರಾಣಿಕರು ಎಲ್ಲ ತಾಲ್ಲೂಕುಗಳಲ್ಲಿ ವಿಕಾಸ ಕಾರ್ಯಗಳನ್ನು ಪ್ರಾರಂಭ ಮಾಡಿದರು. ಅಲ್ಲಿ ಒಂದು ದಶಕಗಳ ಹಳೆಯ ಸಮಸ್ಯೆ ಇತ್ತು. ಅದು ಬೆಳಗಾವಿ ಬದಿಯ ಬಳ್ಳಾರಿ ನಾಲಾ. ಅಲ್ಲಿ ಅನೇಕ ಬೇಸಾಯಗಾರರಿಗೆ ದುಃಸ್ವಪ್ನವಾಗಿ ಬಿಟ್ಟಿತು. ಮಳೆಗಾಲದಲ್ಲಿ ಅದರ ನೀರು ಎರಡು ಬದಿಗೆ ನುಗ್ಗಿ ನೂರಾರು ಎಕರೆ ಫಲವತ್ತಾದ ಭೂಮಿ ಮುಳುಗಿ ಹೋಗುತ್ತಿತ್ತು, ಬೆಳೆಗಳ ನಾಶವಾಗುತ್ತಿತ್ತು. ಈ ಸಮಸ್ಯೆ ಬಗೆಹರಿಸಲು ಪುರಾಣಿಕರು ಇಂಜಿನಿಯರಗಳೊಂದಿಗೆ ವ್ಯಕ್ತಿಗತವಾಗಿ ಪರಿಶೀಲನೆ ಮಾಡಿ ಕೆಲವು ಕೃಷಿಕರ ಜಮೀನು ತೊಡಕಾಗಿರುವದನ್ನು ಕಂಡು, ಹೊಲದೊಡೆಯರ ಮನಒಲಿಸಿ ಭೂಮಿ ಕೊಡುವುದಾಗಿ ಒಪ್ಪಿಸಿದರು. ಅದಕ್ಕಾಗಿ ಹಿಡಕಲ್ ಡ್ಯಾಮ್‌ದಿಂದ ಬುಲ್ಲಡೋಜರ ತಂದು ಸರಿಯಾಗಿ ನೀರು ಹರಿದು ಹೋಗಲು ನಾಲಾ ಮಾಡಿದರು. ಮುಂದೆ ಮಳೆಗಾಲದಲ್ಲಿ ನೀರು ನಾಲಾದಲ್ಲಿ ಹರಿದು ಹೋಗಿ ಫಸಲಲ್ಲಿ ಬಂದು ನಿಲ್ಲುವುದು ನಿಂತಿತು ಮತ್ತು ಫಸಲು ಚೆನ್ನಾಗಿ ಬೆಳೆಯಿತು. ಇದನ್ನು ನೋಡಲು ಜನರು ಮತ್ತು ಮಾಧ್ಯಮದವರು ರಾಜ್ಯದ ಮೂಲೆ ಮೂಲೆಯಿಂದ ಬಂದರು. ಯಾವ ಯೋಜನೆ ಹಲವಾರು ಕೋಟಿ ರೂಪಾಯಿ ವೆಚ್ಚದಲ್ಲಿ ಪೂರ್ಣವಾಗಬೇಕಿತ್ತೋ ಅಲ್ಲಿ ಒಂದು ಲಕ್ಷ ರೂಪಾಯಿಯಲ್ಲಿ ಪುರಾಣಿಕರು ಮಾಡಿದರು.

ಸರಕಾರ ಮತ್ತು ಬೆಳೆಗಾವಿ ಜಿಲ್ಲೆಯ ಜನರು ಈ ಕಾರ್ಯಕ್ಕಾಗಿ ಬಹಳ ಪ್ರಶಂಸಿದರು. ಪುರಾಣಿಕರು ಎಂ.ಕೆ.ಹುಬ್ಬಳ್ಳಿ ಶುಗರ ಫ್ಯಾಕ್ಟರಿ ಪುನಃ ಪ್ರಾರಂಭ ಮಾಡಿಸಿದರು ಮತ್ತು ಇದರಿಂದ ಕಬ್ಬಿನ ಬೆಳೆಗಾರರಿಗೆ ಬಹಳ ಸಂತೋಷವಾಯಿತು. ಅವರು ಮುಖ್ಯ ಇಂಜಿನಿಯರ ಶ್ರೀ ಎಸ್.ಜಿ.ಬಾಳೆಕುಂದ್ರಿ ಅವರ ಜೊತೆಗೂಡಿ ಮಲಪ್ರಭಾ ಆಣೆಕಟ್ಟಿನ ಯೋಜನೆಯನ್ನು ನಿಶ್ಚಯಿಸಿದ ಸಮಯದಲ್ಲಿ ಪೂರ್ತಿಗೊಳಿಸಿದರು ಮತ್ತು ಇದರಿಂದ ಕರ್ನಾಟಕದ ಸಾವಿರಾರು ಎಕರೆ ಭೂಮಿಗೆ ನೀರಾವರಿ ವ್ಯವಸ್ಥೆ ಆಯಿತು. ಪುರಾಣಿಕರು, ಆಣೆಕಟ್ಟಿನ ಕಾರಣದಿಂದ ಯಾವ ಊರುಗಳು ಮುಳುಗಡೆ ಯಾಗಿತೋ ಅಲ್ಲಿಜನರಿಗೆ ಹೊಸ ಹಳ್ಳಿಗಳನ್ನು ಕಟ್ಟಿ ಅದರಲ್ಲಿ ಅವರಿಗೆ ಮನೆಗಳನ್ನು, ವಿದ್ಯುತ್ತ, ಜಲ, ಶಾಲೆ, ಆಸ್ಪತ್ರೆ

ಸಹಿತ ವ್ಯವಸ್ಥೆ ಮಾಡಿಕೊಟ್ಟರು ಮತ್ತು ಆ ಜನರಿಗೆ ಉದ್ಯೋಗದ ವ್ಯವಸ್ಥೆಯನ್ನೂ ಮಾಡಿದರು. ಎರಡು ವರ್ಷಗಳ ಅವಧಿಯಲ್ಲಿ ಬೆಳೆಗಾವಿಯಲ್ಲಿ ಪುರಾಣಿಕರು ಅನೇಕ ಸವಾಲಿನ ಸಮಸ್ಯೆಗಳನ್ನು ಎದುರಿಸಿದರು ಮತ್ತು ಹಲವಾರು ಯೋಜನೆಗಳನ್ನು ಪೂರ್ತಿ ಗೊಳಿಸಿದರು. ಅವರು ೧೯೭೧ರ ಸೆನ್ಸ್, ಎರಡು ಚುನಾವಣೆಗಳು, ರಾಷ್ಟ್ರಪತಿ ಮತ್ತು ಪ್ರದಾನಿ ಮಂತ್ರಿಗಳ ಬೇಟಿ, ಬರಗಾಲ, ಬಾಂಗ್ಲ ಯುದ್ಧದಲ್ಲಿ ಸತ್ತವರ ಕುಟುಂಬ ಹಾಗೂ ಗಾಯಾಳುಗಳ ಪುನರ್ವಸತಿ ಹೈನುಗಾರಿಕೆ ಇವುಗಳನ್ನು ಯಶಸ್ವಿಯಾಗಿ ಕೈಗೊಂಡರು. ಪೂರ್ಣ ಮಾಡುವ ಜೊತೆಗೆ ಹಲವು ವಿಕಾಸ ಯೊಜನೆಗಳನ್ನು ಕೈಗೊಂಡರು ೨೧ ರಸ್ತೆಗಳ ಯೋಜನೆಗಳು ಬೆಳಗಾವ ನಲ್ಲಿ ಹಾಲಿನ ಡೇರಿ, ೬೬ ಗ್ರಾಮೀಣ ಪ್ರದೇಶಕ್ಕೆ ಜಲ ಸಂಪರ್ಕ, ೩೪೪ ಶಾಲೆ ಕಟ್ಟಡಗಳು, ೧೬ ಸರೋವರಗಳ ಪುನರ್ನಿರ್ಮಾಣ ಇತ್ಯಾದಿ ಪೂರ್ಣಮಾಡಿದರು.

ಪುರಾಣಿಕರನ್ನು ಬೆಂಗಳೂರಿಗೆ ೧೯೭೨ ರಲ್ಲಿ ವರ್ಗಮಾಡಿದ ಸಮಯದಲ್ಲಿ ಹಲವಾರು ಬೀಳ್ಕೊಡುಗೆ ಕಾರ್ಯಕ್ರಮಗಳನ್ನು ಎರ್ಪಡಿಸಲಾಯಿತು ಅದರಲ್ಲಿ ಎಲ್ಲರೂ ಅವರನ್ನು ತುಂಬ ಪ್ರಶಂಸಿಸಿದರು.

೧೯೭೨ ಕಾರ್ಮಿಕ ಕಮಿಷನರರಾಗಿ ಬೆಂಗಳೂರಿಗೆ ಅವರ ವರ್ಗಾವಣೆ ಆಯಿತು. ಆಗ ಎಚ್.ಎಮ್.ಟಿ., ಬೆಂಗಾಲ ಲ್ಯಾಂಪ್ಸ, ರೆಮ್‌ಕೊ ಇತ್ಯಾದಿ ಕಾರ್ಖಾನೆಗಳಲ್ಲಿ ಅಶಾಂತಿ ಇತ್ತು. ಅತ್ಯಂತ ಕಡಿಮೆ ಸಮಯದಲ್ಲಿ ಪುರಾಣಿಕರು ಸಮಸ್ಯೆಗಳಿಗೆ ನವೀನ ವಿಧಾನಗಳಿಂದ ಪರಿಹಾರ ಮಾಡಿದರು. ಇದರ ಮೇಲೆ ಹಿಂದೂ ಪತ್ರಿಕೆಯಲ್ಲಿ "ಕೈಗಾರಿಕಾ ಸಂಬಂಧಗಳಲ್ಲಿ ಹೊಸ ಪ್ರಯೋಗ" ಎಂದು ಲೇಖನ ಬಂದಿತು. ಪುರಾಣಿಕರು ಕೈಗಾರಿಕ ಶಾಂತಿ ಕಾಪಾಡಲು ಪ್ರಯತ್ನಿಸಿದರು. ಅವರು ಶ್ರಮಿಕ ವರ್ಗ ಮತ್ತು ನಿರ್ವಹಣಾ ಅಧಿಕಾರಿಗಳೊಡನೆ ಸಂಪರ್ಕದಲ್ಲಿದ್ದು ಇವರಲ್ಲಿ ಎದುರಾಗುವ ಸಮಸ್ಯೆಗಳಿಗೆ ಪ್ರಾರಂಭದಲ್ಲೆ ಪರಿಹಾರ ಕಂಡುಹಿಡಿಯುತ್ತಿದ್ದರು. ಕಲ್ಯಾಣ ಕಮಿಷನ್‌ರರಾಗಿ ಅವರು ಗಣಿಗಳಲ್ಲಿ ಕೆಲಸಮಾಡುವವರಿಗೆ ೧೫೦೦ ವಸತಿ, ವಿದ್ಯುತ್ತ, ಕುಡಿಯುವ ನೀರಿನ ಸೌಲಭ್ಯಗಳ ವ್ಯವಸ್ಥೆಗಳ ಜೊತೆಗೆ ಸ್ಕೂಲು, ಕಾಲೇಜು, ಆಸ್ಪತ್ರೆಗಳ ವ್ಯವಸ್ಥೆ ಮಾಡಿದರು.

ಕೇಂದ್ರ ಸರಕಾರವು ಪುರಾಣಿಕರ ಈ ಕಾರ್ಯಗಳಿನ್ನು ಪ್ರಶಂಸಿತು. ಅಷ್ಟೇ ಅಲ್ಲದೆ ೧೯೭೬ ರಲ್ಲಿ ಸೇವೆಯಿಂದ ನಿವೃತ್ತರಾಗುವ ಮುಂಚೆ ತಮಿಳುನಾಡು ಮತ್ತು ಆಂದ್ರಪ್ರದೇಶಗಳ ಜವಾಬ್ದಾರಿಯನ್ನೂ ಅವರಿಗೆ ಕೊಟ್ಟಿತು. ಅಲ್ಲಿಯೂ ಈ ಥರದ ಬೆಳವಣಿಗೆಯ ಕಾರ್ಯಗಳನ್ನು ಅವರು ಮಾಡಿದರು.

ಪುರಾಣಿಕರು ನಿವೃತ್ತ ಆಗುವ ಸಮಯದಲ್ಲಿ ಕರ್ನಾಟಕ ಸರಕಾರವು ತನ್ನ ಮಂತ್ರಿಗಳ ಸಂಪುಟ ಸಭೆಯಲ್ಲಿ ಪುರಾಣಿಕರ ಕಳಂಕರಹಿತ ಸರಕಾರಿ ಸೇವೆ ಅನುಕರಣೀಯ ಎಂದು ಹೇಳಿ ಅವರ ಜನಸೇವೆಯನ್ನು ಪ್ರಶಂಸಿತು ಮತ್ತು ದಾಖಲಿಸಿತು.

**ಹೈದರಾಬಾದ ಕ್ಷೇತ್ರದಲ್ಲಿ ಕನ್ನಡ ಭಾಷಾ ಅಭಿವೃದ್ಧಿಯಲ್ಲಿ ಪುರಾಣಿಕರ ಕೊಡುಗೆ :**
ನಿಜಾಮ್‌ರ ಸಾಮ್ರಾಜ್ಯ ಈಗಿನ ಕರ್ನಾಟಕ ಮತ್ತು ಮಹಾರಾಷ್ಟ್ರ ವ್ಯಾಪ್ತಿಯಲ್ಲಿ ಬರುವ ಬಹಳ ಪ್ರದೇಶಗಳಲ್ಲಿ ವ್ಯಾಪಿಸಿತ್ತು. ಅಲ್ಲಿಗೆ ಸೇರಿದ ಈಗಿನ ಬೀದರ, ರಾಯಚೂರು, ಗುಲಬರ್ಗಾದಲ್ಲಿ ಕನ್ನಡ ಮಾತಾಡುವ, ಈ ಜಿಲ್ಲೆಗಳಲ್ಲಿ ಜನರು ತಮ್ಮ ಮಾತೃ ಭಾಷೆ ಕನ್ನಡವನ್ನು ಮರೆಯುವಂತೆ ಆಗಿತ್ತು ೨೨೪ ವರ್ಷಗಳ ಮತ್ತು ೭ ಪೀಳಿಗೆಯ ನಿಜಾಮ ರಾಜವಂಶಸ್ಥರ ಆಳ್ವಿಕೆಯಲ್ಲಿ ಉರ್ದು ಭಾಷೆಗೆ ಪ್ರಾಮುಖ್ಯತೆ ಇತ್ತು ಮತ್ತು ತುಂಬಾ ಶಾಲೆಗಳಲ್ಲಿ ಉರ್ದು ಬೋಧನೆಯು ಮಾಧ್ಯಮವಾಗಿತ್ತು.

ಕನ್ನಡಕ್ಕೆ ಪುನರ್ ಜೀವನ ಕೊಡಲು ಬಹಳ ಪರಿಶ್ರಮದ ಕೆಲಸವಾಗಿತ್ತು. ಪುರಾಣಿಕರು ಪ್ರಮುಖ ಸಾಹಿತ್ಯಕಾರರಾದ ಭೀಮಸೇನರಾವ ಮತ್ತು ಮಾನ್ವಿ ನರಸಿಂಹ ರಾವ ಜೊತೆಗೂಡಿ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ ಮಾಡಿದರು ಮತ್ತು ಅದರಿಂದ ಕನ್ನಡ ಕಲಿಸಲು ಸಂಭಂದ ಪಟ್ಟ ಪುಸ್ತಕಗಳನ್ನು ಮುದ್ರಿಸುವ ಕಾರ್ಯ ಕೈಗೆತ್ತಿ ಕೊಂಡರು. ಸ್ವಯಂ ಸೇವಕರನ್ನು ಮನೆ ಮನೆಗೆ ಕಳಿಸಿ ಕನ್ನಡ ಬಾಷೆಗೆ ಪ್ರಚಾರ ನೀಡಿದರು ಮತ್ತು ಪರೀಕ್ಷೆ ಆಯೋಜಿಸುವುದು ಮತ್ತು ಪ್ರಮಾಣಪತ್ರ ಕೊಡುವುದು ಮಾಡುತ್ತ ಕನ್ನಡ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿ ಪ್ರಮುಖ ಬರಹಗಾರರಾದ ಮಾಸ್ತಿ, ಅನಕೃ, ಕುವೆಂಪು, ಗೋಕಾಕ ರನ್ನು ಆಮಂತ್ರಿಸುತ್ತಿದ್ದರು.

ಮತ್ತೊಂದು ಸಂಘ "ಕನ್ನಡ ಸಾಹಿತ್ಯ ಮಂದಿರದ" ಸ್ಥಾಪನೆ ಮಾಡಿ ಅದರ ಅಡಿಯಲ್ಲಿ ಕನ್ನಡ ಮಾಧ್ಯಮ ಸ್ಕೂಲುಗಳನ್ನು ಪ್ರಾರಂಭಿಸಿ ಕನ್ನಡ ಕಾರ್ಯಕ್ರಮಗಳನ್ನು ಮಾಡುತ್ತಿದ್ದರು. ಪುರಾಣಿಕರು ಅಲ್ಲಿಯ ಉಪಾಧ್ಯಕ್ಷರಾಗಿದ್ದರು ಮತ್ತು ಈ ಸಂಸ್ಥೆ ಈಗಲೂ ಸಕ್ರಿಯವಾಗಿ ಕಾರ್ಯನಿರತವಾಗಿದೆ.

ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯರವರು ಬೀದರನಲ್ಲಿ ಕನ್ನಡ ಹಬ್ಬ ಕಾರ್ಯಕ್ರಮ ಉದ್ಘಾಟನೆ ಮಾಡಿದರು ಮತ್ತು ಅಲ್ಲಿಯ ಸಮಾರಂಭ ಅತ್ಯಂತ ಯಶಸ್ವಿಯಾಗಿತ್ತು. ಬಸವಕಲ್ಯಾಣದಲ್ಲಿ ಕನ್ನಡ ಬಾಷಾ ಜನರು ಬಹುಮತದಲ್ಲಿದ್ದರೂ ಮತ್ತು ಅವರ ಪುಣ್ಯ ಕ್ಷೇತ್ರ ಬಸವಕಲಾಣ್ಯ ಅಲ್ಲಿ ಇದ್ದರೂ

೧೯೫೬ ರಲ್ಲಿ ಭಾಷಾ ಆಧಾರದಿಂದ ಪುನರ್ ಸಂಘಟಿಸುವ ಸಂಧರ್ಬದಲ್ಲಿ ಮಹಾರಾಷ್ಟ್ರದ ಉಸ್ಮಾನಾಬಾದನಲ್ಲಿ ಕೂಡಿಸಲು ಹ್ಯನ್ನಾರವಿತ್ತು ಇದರಿಂದ ಪುರಾಣಿಕರಿಗೆ ದುಃಖವಾಯಿತು. ಆಗ ಪ್ರಮುಖ ವ್ಯಕ್ತಿಗಳನ್ನು ಸಜ್ಜುಗೊಳಸಿ, ಬಲವಾದ ಮನವಿ ಪತ್ರವನ್ನು ಸಂಬಂಧಿತ ಅಧಿಕಾರಿಗಳಿಗೆ ಕೊಟ್ಟರು. ಪರಿಣಾಮ ಬಸವ ಕಲ್ಯಾಣ ಕರ್ನಾಟಕದ ಬೀದರ ಜಿಲ್ಲೆಯಲ್ಲಿ ಉಳಿಸಿ ಕೊಳ್ಳಲು ಸಾಧ್ಯವಾಯಿತು.

## ಕರ್ನಾಟಕದಲ್ಲಿ ಕನ್ನಡ ಪ್ರಚಾರಕ್ಕಾಗಿ ಪುರಾಣಿಕರ ಕೊಡುಗೆ :

ಬಹಳ ವರ್ಷಗಳ ಪರಿಶ್ರಮದಿಂದ ಕನ್ನಡ ಸಾಹಿತ್ಯ ಪರಿಷತ್ತ ಬೆಂಗಳೂರು, ಪ್ರಕಾಶಿಸಿದ ಕನ್ನಡ–ಕನ್ನಡ ಶಬ್ದಕೋಶ ದಲ್ಲಿ ಪುರಾಣಿಕರು ಸದಸ್ಯರಾಗಿದ್ದರು. ತಮ್ಮ ಕನ್ನಡ ಭಾಷಾ ಮತ್ತು ಸಾಹಿತ್ಯದ ಅಪಾರ ಜ್ಞಾನದ ಕಾರಣ ಅವರ ತಮ್ಮ ಅಮೂಲ್ಯ ಸೇವೆ ಕೊಟ್ಟಿರುವರು.

ಪುರಾಣಿಕರು ಬಸವ ಸಮಿತಿಯ ಉಪಾಧ್ಯಕ್ಷರಾಗಿದ್ದರು ಮತ್ತು ಬಸವ ಪಥ, ಬಸವ ಜರ್ನಲ್ ಸಂಪಾದಕರಾಗಿ ಕನ್ನಡ ಪ್ರಚಾರವನ್ನು ಲೇಖನ ಮತ್ತು ಕಾರ್ಯಕ್ರಮ ಮೂಲಕ ಮಾಡಿದರು.

ಒಂದುಸಲ ಪುರಾಣಿಕರು ಮುಖ್ಯಮಂತ್ರಿ ವೀರೆಂದ್ರ ಪಾಟೀಲರನ್ನು ವಿಮಾನ ನಿಲ್ದಾಣನಲ್ಲಿ ಭೇಟಿಯಾದರು. ಅವರು ಕರ್ನಾಟಕದಲ್ಲಿ ಕನ್ನಡ ಉತ್ತೇಜಿಸಲು ಸರಕಾರಿ ಕಾರ್ಯಲಯಗಳಲ್ಲಿ ಆಡಳಿತ ಭಾಷೆಯನ್ನಾಗಿ ಮಾಡಲು ಸಲಹೆ ಕೊಟ್ಟರು.

ಶ್ರೀ ಪಾಟೀಲರು ಪುರಾಣಿಕರಿಗೆ ಅದರ ಒಂದು, ಸೂಚನಾ ಪತ್ರ ತಯಾರಿಸಲು ಹೇಳಿದರು. ಪುರಾಣಿಕರು ಅಲ್ಲಿಯೇ ತಕ್ಷಣವೇ ಒಂದು ಸೂಚನಾ ಪತ್ರಮಾಡಿದರು ಮತ್ತು ಅದರ ಮೇಲೆಯೇ ಶ್ರೀ ಪಾಟೀಲರು ಅನುವೋದನೆಯನ್ನು ಕೊಟ್ಟರು. ಒಂದು ಸಮಿತಿಯ ನಿರ್ಮಾಣವಾಗಿ ಅದಕ್ಕೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅಧ್ಯಕ್ಷರು ಮತ್ತು ಪುರಾಣಿಕರು ಕಾರ್ಯದರ್ಶಿಯಾಗಿ, ನೇಮಕವಾದರು. ಶೀಘ್ರ ಸಮಯದಲ್ಲಿಯೇ ಆಡಳತದಲ್ಲಿ ಕನ್ನಡದ ಅನುಷ್ಟಾನಕ್ಕೆ ವಿಧಿ ವಿಧಾನಗಳನ್ನು ರೂಪಿಸಲು ತಿಳಿಸಿದರು. ಅಲ್ಪ ಸಮಯದಲ್ಲೇ ಈ ಕಾರ್ಯವು ಪೂರ್ಣಗೊಂಡು ಅನುಷ್ಟಾನಕ್ಕೆ ಬಂದಿತು ಮತ್ತು ಸ್ವಲ್ಪ ಸಮಯದಲ್ಲಿಯೇ ಕಾರ್ಯ ಮುಗಿದದ್ದು ಕಂಡು ಶ್ರೀ ಪಾಟೀಲರು ಬಹಳವಾಗಿ ಅಭಿನಂದಿಸಿದರು.

ಮುಂದೆ ತಾಲ್ಲೂಕು ಮತ್ತು ಜಿಲ್ಲೆಗಳಲ್ಲೂ ಕನ್ನಡ ಆಡಳಿತ ಭಾಷೆಯಾಗಿ ಅಳವಡಿಸುವ ಕಾರ್ಯ ಕನ್ನಡ ಸಾಹಿತ್ಯ ಪರಿಷತ್ತಿಗೆ ವಹಿಸಿದರು. ಈ ಕಾರ್ಯವನ್ನು ಮಾಡಲು ಪರಿಷತ್ತು ಒಂದು ಸಮಿತಿ ರಚನೆ ಮಾಡಿತು, ಅದರ ಅಧ್ಯಕ್ಷರು ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ ನಾರಾಯಣ ಮತ್ತು ಕಾರ್ಯದರ್ಶಿಯಾಗಿ ಶ್ರೀ ಪುರಾಣಿಕರು ಆದರು. ಅದರ ಅನುಷ್ಠಾನದ ಕೆಲಸ ಹಲವು ಹಂತಗಳಲ್ಲಿ ಪೂರ್ಣ ಗೊಂಡಿತು.

ಪುರಾಣಿಕರಿಗೆ ಗಾಲೀಬ ಮತ್ತು ಗಾಂಧಿ ಅವರ ಶತಾಬ್ದಿ ಕಾರ್ಯಕ್ರಮಗಳಲ್ಲಿ ಮುಖ್ಯ ಪಾತ್ರ ದೊರಕಿತು. ಈ ಅವಕಾಶವನ್ನು ಅವರು ಬಳಸಿ ಕನ್ನಡದ ಸಭಿಕರಿಗೆ ಅವರ ಕೊಡುಗೆಗಳನ್ನು ಮನದಟ್ಟಿಸುವಂತೆ ಮಾಡಿದರು. ಗಾಂಧಿ ಶತಾಬ್ದಿಯ ಸಮಾರಂಭಕ್ಕೆ ಶ್ರೀ ಗಡಿನಾಡು ಗಾಂಧಿ ಖಾನ ಗಫಾರ ಖಾನ್‌ರನ್ನು ಸರಕಾರದವರು ಆಮಂತ್ರಿಸಿದ್ದರು ಮತ್ತು ಪುರಾಣಿಕರನ್ನು ಅವರ ಉರ್ದು ಭಾಷಣವನ್ನು ಕನ್ನಡ ದಲ್ಲಿ ಅನುವಾದ ಮಾಡಲು ನೇಮಿಸಿದ್ದರು. ಪುರಾಣಿಕರು ಹಲವಾರು ಸಮಾರಂಭಗಳಲ್ಲಿ ಕನ್ನಡದಲ್ಲಿ ತಕ್ಷಣವೇ ಅನುವಾದವನ್ನು ಮಾಡಿ ಎಲ್ಲರ ಮೆಚ್ಚುಗೆ ಗಳಿಸಿದ್ದರು. ಇದಲ್ಲದೆ ಪುರಾಣಿಕರು ಕನ್ನಡ ವಿಕಾಸಕ್ಕೆ ಸಂಬಂಧಿಸಿದ ಹಲವಾರು ಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿದ್ದು ಕನ್ನಡ ಬೆಳೆಸಲು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

## ಪುರಾಣಿಕರ ಸಾಹಿತ್ಯ ಸೇವೆ ಮತ್ತು ಸಾಧನೆಗಳು :

ಪುರಾಣಿಕರು ಬರೆದ ಕೃತಿಗಳ ಪಟ್ಟಿ ಮತ್ತು ಪುರಾಣಿಕರ ಬಗ್ಗೆ ಬರೆದ ಪುಸ್ತಕಗಳ ಪಟ್ಟಿ ಬೇರೆಯಾಗಿಯೇ ಈ ಸೈಟನಲ್ಲಿ ಇದೆ.

**ಇಲ್ಲಿ ಮುಖ್ಯಾಂಶ ಮಾತ್ರ ಕೊಡಲಾಗಿದೆ :** ಪುರಾಣಿಕರು ಕನ್ನಡ, ಆಂಗ್ಲ, ಹಿಂದಿ, ಸಂಸ್ಕೃತ ಮತ್ತು ಉರ್ದು ಬಾಷೆಯಲ್ಲಿ ವಿದ್ವಾಂಸರಾಗಿದ್ದರು. ಅವರ ಬರಹದಲ್ಲಿ ಈ ಎಲ್ಲ ಬಾಷೆಗಳ ಸುಗಂಧವು ಅನುಭವವಾಗುತ್ತದೆ. ಪುರಾಣಿಕರ ಸಾಹಿತ್ಯವು ಕವನ, ವಚನ, ನಾಟಕ, ಮಕ್ಕಳ ಸಾಹಿತ್ಯ, ಗದ್ಯ, ಜೀವನ ಚರಿತ್ರೆ ಬರಹಗಳನ್ನು ಒಳಗೊಂಡಿವೆ.

ಪುರಾಣಿಕರ ೮ ಕವನ ಸಂಕಲನಗಳಿವೆ ಅವುಗಳಲ್ಲಿ ಪ್ರಕೃತಿ, ಪ್ರೇಮ, ಕರ್ನಾಟಕ, ಕನ್ನಡ, ರಾಷ್ಟ್ರೀಯತೆ, ವಿವೇಕ ಮತ್ತು ಅನೇಕ ವಿಷಯಗಳನ್ನು ಪ್ರತಿಪಾದಿಸಲಾಗಿದೆ.

ಅವರ ಪ್ರಸಿದ್ಧ ತಾತ್ವಿಕ ಕಾವ್ಯ ರಚನೆ "ಮೊದಲು ಮಾನವನಾಗು" ಬಹಳ ಲೋಕಪ್ರಿಯವಾಗಿದೆ.

ಈ ಕವನವನ್ನು ಸುಪ್ರಸಿದ್ಧ ಸಂಗೀತಗಾರರು/ಗಾಯಕರು ಹಾಡಿರುವರು. ಪುರಾಣಿಕರ "ಮರುಳ ಸಿದ್ದನ ಕಂತೆ" ಡಿ.ವ್ಹಿ.ಗುಂಡಪ್ಪ ನವರ ಪ್ರಸಿದ್ದ ಕಾವ್ಯ ಕೃತಿ "ಮಂಕು ತಿಮ್ಮನ ಕಗ್ಗ" ದ ಹಾಗೆ ಅಧ್ಯಾತ್ಮಿಕತೆಯಂತೆ ಕಂಡು ಬರುತ್ತದೆ ಮತ್ತು ಇದನ್ನು ಅದರ ಸಣ್ಣ ತಮ್ಮನೆಂದು ತಿಳಿಯಲಾಗುತ್ತದೆ.

ಪುರಾಣಿಕರು ಎಲ್ಲ ರಚನೆಗಳನ್ನು "ಕಾವ್ಯಾನಂದ'ಎಂಬ ಅವರ ಕಾವ್ಯನಾಮದಲ್ಲಿ ಬರೆದರು. (ಕಾವ್ಯ –ಕವನ, ಆನಂದ –ಸಂತೋಷ). ಓದುಗರಿಗೆ ಆನಂದದ ಅನುಭವವು ಅವರ ಬರಹದಲ್ಲಿ ಸಿಗುತ್ತದೆ.

ಪುರಾಣಿಕರು ೩ ವಚನ ಕೃತಿಗಳನ್ನು ಬರೆದಿರುವರು. ಅವರ ಅಂಕಿತನಾಮ " ಸ್ವತಂತ್ರಧೀರ ಸಿದ್ಧೇಶ್ವರ" ( ಸ್ವತಂತ್ರ, ಧೀರ–ಧೈರ್ಯಶಾಲಿ), ಸಿದ್ಧೇಶ್ವರರು ೧೬ನೇ ಶತಮಾನದ ಸಂತರು, ಇವರ ಮೇಲೆ ಪುರಾಣಿಕರು ಬಹಳ ಶ್ರದ್ಧೆ ಇಟ್ಟಿದ್ದರು.

ಪುರಾಣಿಕರ ಪ್ರಥಮ ವಚನ ಕೃತಿ "ವಚನೋದ್ಯಾನ" ಕ್ಕೆ ಬಿಲ್ವಾರ ಪ್ರಶಸ್ತಿ ಕೊಲಕತ್ತಾದ ಭಾರತೀಯ ಭಾಷಾ ಪರಿಷತ್ತ ದಿಂದ ದೊರೆಯಿತು. ಈ ಪ್ರಶಸ್ತಿಯನ್ನು ಪಡೆದ ಮೊದಲ ಕರ್ನಾಟಕದ ಲೇಖಕ ಕವಿಗಳು ಪುರಾಣಿಕರು.

"ಶರಣ ಚರಿತಾಮೃತ" ಪುರಾಣಿಕರ ಒಂದು ಬೃಹತ್ ಕೃತಿ ಇದರಲ್ಲಿ ೬೪ ಪ್ರಸಿದ್ಧ ಶಿವಶರಣ ಜೀವನವೃತ್ತಾಂತವಿದೆ. ಪ್ರಥಮ ಮುದ್ರಣ ೧೯೬೪ ರಲ್ಲಿ ಮತ್ತು ಅದು ಏಳು ಸಲ ಮರುಮುದ್ರಣವಾಗಿದೆ ಮತ್ತು ಇಂದಿಗೂ ಜನರಲ್ಲಿ ತುಂಬ ಬೇಡಿಕೆ ಇದೆ. ಇದು ಶಿವ ಶರಣರ ಬಗ್ಗೆ ಅರಿಯಲು ಒಂದು ಪ್ರಮುಖ ಸಂದರ್ಭಗ್ರಂಥವಾಗಿದೆ.

ಪುರಾಣಿಕರು ಮಕ್ಕಳಿಗಾಗಿ ಐದು ಮಕ್ಕಳ ಕವನ ಪುಸ್ತಕಗಳು, ಒಂದು ಪ್ರವಾಸ ಸಂಕಲನ, ಒಂದು ನಾಟಕ ಮತ್ತು ಸರ್ವಜ್ಞರ ಜೀವನ ಲೇಖನ ಬರೆದಿದ್ದಾರೆ. ಅವರ ಮಕ್ಕಳ ಕವನ ಸಂಕಲನ "ತುಪ್ಪಾ ರೊಟ್ಟಿ ಗೆಗೆಗೆ" ಇದಕ್ಕೆ ರಾಷ್ಟ್ರೀಯ ಪುರಸ್ಕಾರ ದೊರೆತಿದೆ.

" ಅಜ್ಜನ ಕೋಲಿದು ನನ್ನಯ ಕುದರೆ" ಕವಿತೆಯು ಬಹಳ ಮೆಚ್ಚುಗೆ ಗಳಿಸಿದೆ ಮತ್ತು ಅದನ್ನು ಸರ್ವಶ್ರೇಷ್ಠ ಮಕ್ಕಳ ಕವನದ ಸಾಲಿನಲ್ಲಿ ಸೇರಿಸಲಾಗಿದೆ. ಪುರಾಣಿಕರು ೧೪ ನಾಟಕಗಳು ರಚಿಸಿರುವರು.

ಅವರು ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಬರೆದ ಮೊದಲ ನಾಟಕ "ಆತ್ಮಾರ್ಪಣೆ"ಯು ಬಸವಣ್ಣ ನವರ ಜೀವನದ ಮೇಲೆ ಆಧಾರಿತ ವಾಗಿದೆ. ಅದೇ ಸಮಯದಲ್ಲಿ ಅದನ್ನು ಪ್ರದರ್ಶಿಸಲಾಯಿತು. ಬಸವೇಶ್ವರರ ಪಾತ್ರವನ್ನು ಪುರಾಣಿಕರು ಅಭಿನಯಿಸಿದ್ದರು. ಅದಕ್ಕೆ ವ್ಯಾಪಕ ಮೆಚ್ಚುಗೆ ಸಿಕ್ಕಿತು. ಅವರ "ಗಿರಿಜಾ ಕಲ್ಯಾಣ" ಗಿರಿಜೆಯ ವಿವಾಹ ರೂಪಕ, ನಾಟಕ ನೃತ್ಯ ರೂಪಕದಲ್ಲಿ ಪ್ರಭಾತ ಕಲಾವಿದರು ಪ್ರದರ್ಶಿಸಿದ್ದು, ರಾಷ್ಟ್ರ ಮಟ್ಟದಲ್ಲಿ ಮೆಚ್ಚುಗೆ ಗಳಿಸಿತ್ತು.

ಪುರಾಣಿಕರ ಜನ್ಮ ಶತಾಬ್ಧಿಯ ಪ್ರಸಂಗದಲ್ಲಿ ಅವರ ೧೪ ಗದ್ಯ ಪುಸ್ತಕಗಳನ್ನು ೩ ಸಂಪುಟಗಳಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯು, ಕರ್ನಾಟಕ ಸರಕಾರ ವತಿಯಿಂದ ೨೦೨೧ ರಲ್ಲಿ ಪ್ರಕಟಿಸಿತು. ಇದಲ್ಲದೆ ಅವರು ಪುರಾಣಿಕರ ಸಮಗ್ರ ಕಾವ್ಯ, ಸಮಗ್ರ ವಚನ ಮತ್ತು ಸಮಗ್ರ ನಾಟಕವನ್ನು ಮರುಪ್ರಕಟಿಸಿದ್ದಾರೆ. ಪುರಾಣಿಕರು ಬರೆದ ಲೇಖನಗಳು ಹಲವಾರು ದಿನಪತ್ರಿಕೆಗಳಲ್ಲಿ, ವಾರ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅವರು ಪ್ರಸಿದ್ಧ ಕವಿಗಳಾದ ನಝೀರ ಅಕ್ಬರಬಾದಿ ಮತ್ತು ಮಿರ್ಜಾ ಗಾಲೀಬರ ಬಗ್ಗೆ ಎರಡು ಕನ್ನಡ ಕೃತಿಗಳನ್ನು ಬರೆದು ಅವರನ್ನು ಕನ್ನಡ ಓದುಗರಿಗೆ ಪರಿಚಯಿಸಿರುವರು. ಹಾಗೆಯೇ ಉರ್ದು ದಿನ ಪತ್ರಿಕೆಗಳಲ್ಲಿ ಪ್ರಸಿದ್ಧ ಕನ್ನಡ ಲೇಖಕರ ಬಗ್ಗೆ ಬರೆದು ಅವರನ್ನು ಉರ್ದು ಓದುಗರಿಗೆ ಪರಿಚಯಿಸಿರುವರು. ಪುರಾಣಿಕರ ಕೆಲವು ರಚನೆಗಳು ಹಿಂದಿ, ಆಂಗ್ಲ, ಉರ್ದು, ಮರಾಠಿ ಮತ್ತು ತೆಲುಗು ಭಾಷೆಗಳಲ್ಲಿ ಅನುವಾದಗೊಂಡಿವೆ. ಪುರಾಣಿಕರ ಕವಿತೆಗಳನ್ನು ಖ್ಯಾತ ಗಾಯಕರು ಹಾಡಿರುವದನ್ನು ರೇಡಿಯೊ ಕಾರ್ಯಕ್ರಮಗಳಲ್ಲಿ ಆಕಾಶವಾಣಿಯ ವಿವಿಧಭಾರತಿಯಲ್ಲಿ ಬಿತ್ತರಿಸಲಾಗುತ್ತದೆ ಮತ್ತು ಅವರ ಹಾಡುಗಳ ಅನೇಕ ಕ್ಯಾಸೆಟ್‌ಗಳು ಜನಪ್ರಿಯ ಆಗಿವೆ. ಪುರಾಣಿಕರ ಭಾಷಣಗಳು, ಇಂಟರವ್ಯೂಗಳು ಮತ್ತು ಅವರ ಕವನಗಳು ಆಕಾಶವಾಣಿಯಲ್ಲಿ ಪ್ರಸಾರವಾದ ಚಿಂತನಾ ಮಾತುಗಳ ಮೆಚ್ಚಿಗೆ ಗೊಂಡಿವೆ. ದೂರದರ್ಶನ ದಿಂದ ಹಾಗೂ ಕರ್ನಾಟಕ ಸರ್ಕಾರದ ಸೂಚನಾ ವಿಭಾಗ ದಿಂದ ಎರಡು ಭಿನ್ನವಾದ ಸಾಕ್ಷ್ಯ ಚಿತ್ರಗಳು ಇವರ ಮೇಲೆ ಚಿತ್ರೀಕರಣವಾಗಿ ಹಲವು ಸಲ ಪ್ರಸಾರಗೊಂಡಿವೆ.

ಪುರಾಣಿಕರ ೬೦ನೆ ವರ್ಷದ ಜನ್ಮ ಮಹೋತ್ಸವದ ಅಭಿನಂಧನಾ ಸಮಾರಂಭ ರಾಜ್ಯಮಟ್ಟದ ಕಾರ್ಯಕ್ರಮವಾಗಿ ನಡೆಯಿತು ಮತ್ತು "ಕಾವ್ಯಾನಂದ" ಎಂಬ ಶೀರ್ಷಿಕೆಯಲ್ಲಿ ಅಭಿನಂದನಾ ಗ್ರಂಥ ಲೋಕಾರ್ಪಣೆ ಗೊಂಡಿತು. ಅದರಲ್ಲಿ ಅವರ ಆತ್ಮಕಥೆಯ ಜೊತೆಗೆ ಪ್ರಸಿದ್ಧ ಲೇಖಕರು ಪುರಾಣಿಕರ ಸಾಹಿತ್ಯದ ಬಗ್ಗೆ ಬರೆದಿರುವ ಲೇಖನಗಳಿವೆ. ಈ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಿ ೪೦, ೦೦೦

ರೂಪಾಯಿ ಅವರಿಗೆ ಅರ್ಪಿಸಲಾಯಿತು.ಪುರಾಣಿಕರು ಈ ಧನರಾಶಿಯಿಂದ "ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ" ಪ್ರಾರಂಭಿಸಿದರು, ಅದರಿಂದ ಕನ್ನಡ ಸಾಹಿತ್ಯಕಾರರಿಗೆ "ಕಾವ್ಯಾನಂದ ಪುರಸ್ಕಾರ" ವನ್ನು ಪ್ರತಿವರ್ಷ ಕೊಡಲಾಗುತ್ತದೆ.

ಈ ಪುರಸ್ಕಾರವನ್ನು ಕಳೆದ ೪೨ ವರ್ಷಗಳಿಂದ ಕೊಡಲಾಗುತ್ತಿದೆ. ಪುರಾಣಿಕರ ಮಕ್ಕಳು ಮತ್ತು ಮೊಮ್ಮಕಳು ಪ್ರೀತಿ ಅಭಿಮಾನದಿಂದ ಕೊಟ್ಟ ಹಣದ ಸಹಾಯದಿಂದ ಪುರಸ್ಕಾರದ ಮೊತ್ತವು ಈಗ ೫೦, ೦೦೦ರೂ ಆಗಿದೆ.

ಪುರಾಣಿಕರ ಎಲ್ಲ ಕೃತಿಗಳನ್ನು ಸಮಗ್ರ ರೂಪದಲ್ಲಿ ಅವರ ಮಗ ಪ್ರಸನ್ನ ಕುಮಾರ ಪುರಾಣಿಕ ಮತ್ತು ಅವರ ಸೊಸೆ ಲತಾ ಪುರಾಣಿಕ ಅವರು ಪ್ರಕಟಿಸಿದ್ದಾರೆ. ಸಮಗ್ರ ಕಾವ್ಯ, ಸಮಗ್ರ ವಚನ, ಸಮಗ್ರ ನಾಟಕ, ಸಮಗ್ರ ಮಕಳ ಸಾಹಿತ್ಯ ಮತ್ತು ಆತ್ಮಕಥೆ ವನ್ನು ತಮ್ಮದೇ ಆದ ಶ್ರೀಗಿರಿ ಪ್ರಕಾಶನದಿಂದ ಇವರು ಪ್ರಕಟಿಸಿದ್ದಾರೆ. ಇದಲ್ಲದೆ ಅವರು ಪುರಾಣಿಕರ ಎರಡು ಗೀತೆಗಳ ಕ್ಯಾಸೆಟ್ ಮಕ್ಕಳ ಕವನ "ನನ್ನ ಕುದರೆ", ಮತ್ತು "ಸಂಗಮ" ಹೆಸರಿನ ಕವನ, ವಚನಗಳನ್ನು ಲೋಕಾರ್ಪಿತ ಗೊಳಿಸಿದ್ದಾರೆ. ಭಾರತದ ಪೋಸ್ಟಲ್ ವಿಭಾಗ ಪುರಾಣಿಕರ "ವಿಶೇಷ ಲಕೊಟೆ" ಯನ್ನು ಬಿಡುಗಡೆ ಮಾಡಿದೆ.

ಶ್ರೀ ಪ್ರಸನ್ನ ಕುಮಾರ ಪುರಾಣಿಕ ಹಾಗೂ ಶ್ರೀಮತಿ ಲತಾ ಪುರಾಣಿಕ ಅವರು ಸಿದ್ಧಯ್ಯ ಪುರಾಣಿಕರ ಸಾಧನೆಯನ್ನು ಜನರ ನಡುವೆ ಜೀವಂತವಾಗಿಡಲು ಸಾಕಷ್ಟು ಪರಿಶ್ರಮ ಪಡುತ್ತಿದ್ದಾರೆ.

**ಪುರಾಣಿಕರರಿಗೆ ಬಂದ ಪ್ರಶಸ್ತಿ ಮತ್ತು ಪುರಸ್ಕಾರ** :

- ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೆಟ
- ಭಾರತೀಯ ಭಾಷಾ ಪರಿಷತ್ತ ಕೊಲಕತ್ತಾ ದಿಂದ "ಭಿಲ್ವಾರ್ ಪ್ರಶಸ್ತಿ"
- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
- ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ
- ಮಾಳವಾಡ ಪ್ರಶಸ್ತಿ

– ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಧಾರವಾಡದಲ್ಲಿ

– ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಮಟ್ಟದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಗುಲಬರ್ಗಾ

– ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಹಲವಾರು ಸಂಸ್ಥೆಗಳಿಂದ ಸನ್ಮಾನಗಳು ಮತ್ತು ಪ್ರಶಸ್ತಿಗಳಿಂದ ಗೌರವ ಸಮರ್ಪಣೆ.

## ಪುರಾಣಿಕರ ಪರಿವಾರ ಮತ್ತು ಪುರಾಣಿಕರ ಸೇವಾ ನಿವೃತ ಜೀವನ :

ಪುರಾಣಿಕರ ತಂದೆಯವರು ಅತ್ಯಂತ ಪಂಡಿತರು ಮತ್ತು ಜ್ಞಾನಿಗಳು ಆದರೆ ಅವರ ಗಳಿಕೆ ಕಡಿಮೆ ಇತ್ತು. ಅವರು ಎಲ್ಲ ಮಕ್ಕಳನ್ನು ಶಿಸ್ತಿನಿಂದ ಸುಸಂಸ್ಕೃತರನ್ನಾಗಿ ಬೆಳೆಸಿದರು ಆದರೆ ಮಕ್ಕಳ ಉಚ್ಚ ಶಿಕ್ಷಣಕ್ಕಾಗಿ ಆರ್ಥಿಕ ನೆರವು ಕೊಡಲು ಸಾಧ್ಯವಿರಲಿಲ್ಲ .

ಪುರಾಣಿಕರು ತಮ್ಮ ವಿದ್ಯಾಭ್ಯಾಸವನ್ನು ಫ್ರೀಶಿಪ್ ಮತ್ತು ಸ್ಕೋಲರಶಿಫ (ವಿದ್ಯಾರ್ಥಿ ವೇತನ) ದಿಂದ ಪೂರ್ಣಗೊಳಸಿದರು. ಪುರಾಣಿಕರು ತಮ್ಮ ತಂದೆಯವರ ಜವಾಬ್ದಾರಿ ತೆಗೆದುಕೊಂಡು ತಮ್ಮದಿಂರಿಗೆ ಆರ್ಥಿಕವಾಗಿ ಓದಲು ನೆರವಾದರು.

ಅವರ ಮೊದಲನೆಯ ತಮ್ಮ ಅನ್ನದಾನಯ್ಯ ಪುರಾಣಿಕರು ಹೈಕೋರ್ಟನಲ್ಲಿ ಹೆಸರಾಂತ ವಕೀಲರಾಗಿದ್ದರು ಮತ್ತು ಎರಡನೆಯ ತಮ್ಮ ಬಸವರಾಜ ಪುರಾಣಿಕ ಇಂಜಿನಿಯರಿಂಗ ಕಾಲೇಜ ಸೇವೆಯಲ್ಲಿ ಪ್ರಾಂಶುಪಾಲರು ರಾಗಿದ್ದರು.

ಪುರಾಣಿಕರು ಗಿರಿಜಾದೇವಿಯವರೊಂದಿಗೆ ಮದುವೆ ಆಗಿ ಅವರಿಗೆ ನಾಲ್ಕು ಜನ ಮಕ್ಕಳು ಇರುವರು. ಪುರಾಣಿಕರ ದೊಡ್ಡ ಮಗಳು ವಿಜಯಾರ ವಿವಾಹ ಕೆ.ಎನ್.ಎಮ್. ನಂದೀಶ್ವರ ರೊಂದಿಗೆ ಆಗಿತ್ತು. ಅವರು ಸೂಪರಿಂಟೆಂಡೆಂಟ ಇಂಜಿನಿಯರ್‌ರಾಗಿ ನಿವೃತ್ತರಾಗಿದ್ದರು.

ಅವರ ಎರಡನೆ ಮಗಳು ಡಾ ಶಿವಗೀತಾರ ವಿವಾಹ ಡಾ ಗಂಗಾಧರ ಪೂಜಾರಿ ರೊಂದಿಗೆ ಆಗಿ ಅಮೇರಿಕೆಯಲ್ಲಿ ಪ್ರಸಿದ್ದ ಡಾಕ್ಟರಾಗಿರುವರು.

ಪುರಾಣಿಕರ ಏಕೈಕ ಮಗ ಪ್ರಸನ್ನ ಕುಮಾರ ಪುರಾಣಿಕ ಜನರಲ್ ಮ್ಯಾನೆಜರರಾಗಿ ನಿವೃತ್ತರಾಗಿರುವರು. ಅವರ ಪತ್ನಿ ಲತಾ ಪುರಾಣಿಕರು.

ಪುರಾಣಿಕರ ಕೊನೆಯ ಮಗಳು ಭಾರತಿ ಅವರ ವಿವಾಹ ಎಸ್.ಎಮ್.ಮೃತ್ಯುಂಜಯರೊಂದಿಗೆ ಆಯಿತು. ಅವರು ಡಿವಿಜನಲ್ ಮ್ಯಾನೆಜರರಾಗಿ ಸೇವಾದಿಂದ ನಿವೃತ್ತರಾಗಿರುವರು.

ಪುರಾಣಿಕರರಿಗೆ ಎಂಟು ಮೊಮ್ಮಕ್ಕಳು. ಅವರೆಲ್ಲ ತಮ್ಮ ಅಜ್ಜ ಹಾಗೂ ತಂದೆತಾಯಿಯರಂತೆ ಉಚ್ಚ ಶಿಕ್ಷಣ ಪಡೆದು ತಮ್ಮ ಜೀವನದಲ್ಲಿ ಯಶಸ್ವಿಯಾಗಿದ್ದಾರೆ ಮಾನವತೆಯನ್ನು ಮೆರೆಯುತ್ತಿದ್ದಾರೆ.

ಪುರಾಣಿಕರು ಸೇವೆಯಿಂದ ನಿವೃತ್ತರಾದ ಬಳಿಕ ಅನೇಕ ಸಂಘ, ಸಂಸ್ಥೆಗಳ ಜೊತೆ ಸಕ್ರಿಯವಾಗಿ ಭಾಗವಹಿಸುತ್ತಿದ್ದರು ಬರವಣಿಗೆ ಮತ್ತು ಪುಸ್ತಕ ಪ್ರಕಾಶಿಸುವುದನ್ನು ಮಾಡುತ್ತ ಸಮಯದ ಸದುಪಯೋಗ ಮಾಡಿದರು. ಅವರು ತಮ್ಮ ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳೊಂದಿಗೆ ಸಂತೋಷದಿಂದಿದ್ದರು.

ಅವರು ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸಿಲು, ಅಧ್ಯಕ್ಷತೆ ವಹಿಸಲು, ಉಪನ್ಯಾಸ ನೀಡಲು ಉತ್ಸುಕರಾಗಿರುತ್ತಿದ್ದರು. ಪುರಾಣಿಕರು ಯಾವುದೇ ಧರ್ಮದ ಜೊತೆ ಪಕ್ಷಪಾತ ಮಾಡುತ್ತಿರಲಿಲ್ಲ. ಎಲ್ಲ ಸಮುದಾಯದವರೊಂದಿಗೆ ಹಾರ್ದಿಕ ಸಂಬಂಧವನ್ನು ಅವರು ಇಟ್ಟುಕೊಂಡಿದ್ದರು. ಅವರನ್ನು ಹಿಂದುಗಳು, ಮುಸಲಮಾನರು, ಕ್ರೈಸ್ತರು, ಜೈನರು, ಬುದ್ಧರು ಎಲ್ಲ ಸಮುದಾಯದವರ ಸಂಘಗಳು ಕಾರ್ಯಕ್ರಮದಲ್ಲಿ ಆಹ್ವಾನಿಸಿ ಅಧ್ಯಕ್ಷತೆ ವಹಿಸಿವಂತೆ ಆಹ್ವಾನಿಸುತ್ತಿದ್ದರು. ಪುರಾಣಿಕರು ತಮ್ಮ ಪರಿವಾರ, ಬಂಧುಗಳು, ಮಿತ್ರರು, ಜೊತೆ ಸಾಹಿತಿಗಳೂ ಮುಂತಾದವರೊಂದಿಗೆ ಆತ್ಮೀಯ ಸಂಬಂಧ ಉಳಿಸಿಕೊಂಡಿದ್ದರು ಮತ್ತು ಅವರಿಗೆ ಸಹಾಯ ಮಾಡಲು ಯಾವಾಗಲೂ ಮುಂದೆ ಇರುತ್ತಿದ್ದರು.

ಸಿದ್ಧಯ್ಯ ಪುರಾಣಿಕರು ೫ ಸೆಪ್ಟೆಂಬರ ೧೯೯೪ ರಂದು ಬೆಂಗಳೂರಿನಲ್ಲಿ ನಿಧನರಾದರು.